॥धर्मो रक्षति रक्षितः॥

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XXXI No. 11 SEPTEMBER 2022 Pages 16 Rs. 2/-




*PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.*

**"Havyaka Sandesha"** is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098 ✆ 2665 2591

***Hon. Editor*** : Smt. Amita S. Bhagwat

***Editorial Committee*** Smt. Shashikala Hegde, Smt. Tanuja Hegde, Shri Umesh Hegde, Smt. Shailaja Hegde

***Publisher*** : Narayan Akadas R., Hon. Gen. Secretary

***Printed at*** : M/s. Navin Printers, Mumbai - 400 016. ✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2019-2020**

***President*** : Shivkumar P. Bhagwat
***Vice - President*** : Sanjay Bhat
***Hon. Gen. Secretary*** : Narayan Akadas
***Hon. Jt. Secretary*** : Umesh Hegde
***Hon. Treasurer*** : A. G. Bhat

***Elected Members :***
Smt. Tanuja Hegde, A. K. Bhat, Smt. Shashikala Hegde, R. N. Kameshwar, N. K. Hegde, Ramesh Vaidya, Gautam Upadhya, Chidanand Bhagwat

***Co-opted Members :***
Umesh Maskeri, Shailaja Hegde

***Editorial***

# Life Without Fear



*This year, as a mark of the celebration of 75th year of our independence, the tricolor in the flag of our country flied everywhere. The Indian National Flag on the roofs of the tiny houses of the villages, at the apartment balconies in the cities, the frontier of the shops, the open space on the carts of the vendors exhibited the spirit of the freedom. The excitement and happiness of our countrymen on getting freedom that time was once again experienced now.*

*The tricolor in our national flag speaks volumes about the wellbeing of the people of the nation. The color Saffron represents sacrifice and strength and it is interesting to note that sacrifice builds up strength. Purity within oneself brings peace, which is reflected through the color white. Similarly, fertility indicated by the color Green also guarantees prosperity. Ashok Chakra at the centre of the flag which is known as the chakra of the duty brings stability and also aims at establishing Dharma. If everyone performs his duty naturally Dharma prevails. And when there is Dharma, one can live freely.*

*Freedom is a feeling that has to be experienced. Generally, freedom is defined as the right to do what one wants. However, freedom in the real sense, is the right to do something that is right and to enjoy those things which we are rightfully entitled to. It is the right to live with dignity. Unfortunately, our people, during pre-independence days were not entitled to it.*

*Dignity stems from self-respect. When can we have self-respect? We can respect ourselves when we feel that we have not done anything wrong consciously. We need not feel guilty for the mistakes we have done inadvertently, as it is said, to err is human. However, when our actions are coupled with selfish interest disregarding the interest of others, it gets deep into our subconscious mind and we tend to lose self-respect. Consequently, the one who does not respect himself finds it difficult to respect others. Moreover, he does not have the frame of mind to accept good qualities of others which he himself does not possess. For example, a person who is not honest, generally believes, the one opposite to him is also corrupt. Without mutual respect there cannot be an open environment conducive for the progress.*

*We wish and hope for the peaceful existence for all with equality and without any kind of fear. Life without fear is a life with freedom.*

*Jai Hind.*

Amita S Bhagwat

e-mail : amitabhagwat@gmail.com

*PAGE DONATED BY :* ***SHRI SADANANDA HEGDEKATTE MOODABIDIRE & FAMILY IN THE MEMORY OF HIS FATHER LATE V. V. HEGDEKATTE***

# ಮಾಸ ಮಹಾತ್ಮೆ

✍ ಗಣಪತಿ ಭಟ್ಟ

*(ಕಳೆದ ಸಂಚಿಕೆಯಿಂದ)*

**ವರಮಹಾಲಕ್ಷ್ಮೀ ವ್ರತ :-**

ಈ ವ್ರತವನ್ನೂ ಶ್ರಾವಣ ಶು. 15ಯ ಹಿಂದಿನ ಶುಕ್ರವಾರದ ದಿನ ಮಾಡತಕ್ಕದ್ದು. ಈ ದಿನ ಮಹಾಲಕ್ಷ್ಮಿಯ ಸುವರ್ಣ ಪ್ರತಿಮೆಯನ್ನು ಕಲಶದ ಮೇಲಿಟ್ಟು ಪೂಜಿಸತಕ್ಕದ್ದು. ಅಶ್ವತ್ಥ, ವಟ, ಬಿಲ್ವ ಮೊದಲಾದ 21 ಜಾತಿಯ ಚಿಗುರೆಲೆಗಳನ್ನು ತಂದು ಅರ್ಪಿಸತಕ್ಕದ್ದು. ಇದರಂತೆ 21 ಅಪೂಪ (ವಡೆ)ಗಳನ್ನು ಮಾಡಿ ನೈವೇದ್ಯ ಮಾಡುವದು. ಹಾಗೂ ಐದು ಮಂದಿ ಮುತ್ತೈದೆಯರಿಗೆ ಬಾಗಿನ ಕೊಡತಕ್ಕದ್ದು. (ಒಂದೇ ನಾಗವಲ್ಲೀ ಎಲೆಯನ್ನು ಸುಣ್ಣಹಚ್ಚದೆ ಒಂದೇ ಅಡಿಕೆಯೊಡನೆ ತಿನ್ನುವದರಿಂದ ತುಟಿಯು ಕೆಂಪಾದರೆ ಮಾತ್ರ ಈ ವ್ರತಕ್ಕಾಗಿ ಸಂಕಲ್ಪ ಮಾಡತಕ್ಕದ್ದೆಂದು ಪೂರ್ವಸೂಚನೆ ಹೇಳಿದ್ದಾರೆ.) ಈ ವ್ರತದಿಂದ ಆಯುಷ್ಮಂತರಾದ ಮಕ್ಕಳನ್ನು ಪಡೆಯುವರು.

ಪಾರ್ವತಿಯು ಈ ವ್ರತವನ್ನು ಆಚರಿಸಿ ಷಣ್ಮುಖನನ್ನು ಪಡೆದಳೆಂದು ವ್ರತಕಥೆಯಲ್ಲಿ ಹೇಳಿದೆ. ಪುರುಷನಾದರೂ ಈ ವ್ರತಾಚರಣೆಯಿಂದ ಭಾಗ್ಯವಂತನೂ ಧನವಂತನೂ ಆಗುವನು. ಪ್ರತಿ ಶುಕ್ಲ ಪಕ್ಷದ ಶುಕ್ರವಾರವು ವಿಶೇಷವಾದದ್ದು. ಯಾವದೇ ಶುಕ್ರವಾರವಾದರೂ ಮಹಾಲಕ್ಷ್ಮಿಯನ್ನು ಪೂಜಿಸುವದರಿಂದಲೂ ಸುವಾಸಿನಿಯರಿಗೆ ಊಟ ಮಾಡಿಸುವುದರಿಂದಲೂ ಧನಾರೋಗ್ಯಾದಿಗಳನ್ನು ಹೊಂದುವರು ಹಾಗೂ ಸಂತಾನಾಭಿವೃದ್ಧಿಯಾಗುವುದೆಂದು ಹೇಳಿದೆ.

ಅಂತು ಶುಕ್ರವಾರ ವ್ರತವು ಸಂತತಿಗೂ ಮಂಗಳವಾರ ವ್ರತವು ಪತಿಗೂ ದೀರ್ಘಾಯುಸ್ಸನ್ನುಂಟು ಮಾಡುವವಾದ್ದರಿಂದ ಇವೆರಡನ್ನೂ ಹಿಂದೂ ಸ್ತ್ರೀಯರು ಬಹು ಭಕ್ತಿಭಾವದಿಂದ ಆಚರಿಸುವರು. ಇದೇ ಕಾರಣದಿಂದ ಮಂಗಳವಾರ, ಶುಕ್ರವಾರಗಳಲ್ಲಿ ದೇವೀ ದೇವಾಲಯಗಳಲ್ಲಿ ವಿಶೇಷ ಪೂಜಾವಿನಿಯೋಗಗಳು ನಡೆಯುವುದೂ, ಸ್ತ್ರೀಯರು ಏಕಭುಕ್ತ ಮಾಡುವುದೂ ಪ್ರಚಾರವಿರುತ್ತದೆ.



ಈ ವರಮಹಾಲಕ್ಷ್ಮೀವ್ರತದ ಪ್ರಚಾರವು ಮಹಾರಾಷ್ಟ್ರದಲ್ಲಿ ಇದ್ದಂತೆ ಕಂಡು ಬರುವದಿಲ್ಲ. ಕರ್ನಾಟಕದ ಕೆಲವು ಕಡೆಗಳಲ್ಲಿ ಮಾತ್ರ ಪ್ರಚಾರದಲ್ಲಿದ್ದದ್ದು ಕಂಡು ಬರುತ್ತದೆ.

**ಶ್ರಾವಣೀ –** ಇದು ಮುಖ್ಯವಾಗಿ ಉಪಾಕರ್ಮವೆಂಬ ವಿಧಿಯನ್ನು ಲಕ್ಷಿಸಿರುತ್ತದೆ. ಇದರ ಪೂರ್ವದಲ್ಲಿ ಉತ್ಸರ್ಜನ ಕರ್ಮವೂ, ಅನಂತರ ಉಪವೀತಧಾರಣವೂ ಸದ್ಯಕ್ಕೆ ನಡಿಯುತ್ತದೆ. ಈ ಉಪಾಕರ್ಮದ ಬಗ್ಗೆ ಬೇರೆ ಬೇರೆ ಶಾಖೆಯವರಿಗೆ ಬೇರೆ ಬೇರೆ ಕಾಲನಿರ್ಣಯವಿರುತ್ತದೆ. ಋಗ್ವೇದಿಗಳಿಗೆ ಶ್ರಾವಣ ಶುಕ್ಲದಲ್ಲಿ ಶ್ರವಣ ನಕ್ಷತ್ರ, ಪಂಚಮೀ ತಿಥಿ, ಹಸ್ತ ನಕ್ಷತ್ರ ಈ ಮೂರು ಕಾಲಗಳು ಹೇಳಲ್ಪಟ್ಟಿವೆ. ಇವುಗಳಲ್ಲಿ ಶ್ರವಣ ನಕ್ಷತ್ರವು ಮುಖ್ಯವಾದದ್ದು. ಸಾಮಾನ್ಯವಾಗಿ ಹಿರಣ್ಯಕೇಶೀ, ಅಪಸ್ತಂಬ, ಬೋಧಾಯನ, ಕಾಣ್ವ, ಮಾಧ್ಯಂದಿನಾದಿ ಎಲ್ಲ ಯಜುರ್ವೇದಿಗಳಿಗೂ, ಅಥರ್ವವೇದಿಗಳಿಗೂ ಶ್ರಾವಣಶುದ್ಧ ಪೌರ್ಣಿಮೆಯೇ ಮುಖ್ಯವು. ಬೇರೆ ಬೇರೆ ಶಾಖೆಯವರಿಗೂ ಶ್ರಾವಣಶುದ್ಧ ಪೌರ್ಣಿಮೆಯೇ ಮುಖ್ಯವು. ಬೇರೆ ಬೇರೆ ಶಾಖೆಯವರಿಗೆ ಬೇರೆ ಬೇರೆ ಗೌಣಕಾಲವು ಹೇಳಲ್ಪಟ್ಟಿದೆ. ಸಾಮವೇದಿಗಳಿಗೆ ಭಾದ್ರಪದ ಶುಕ್ಲಪಕ್ಷದಲ್ಲಿ ಹಸ್ತ ನಕ್ಷತ್ರವು ಮುಖ್ಯ ಕಾಲವು. ಈ ಪ್ರಕಾರ ಮುಖ್ಯ ಹಾಗೂ ಗೌಣ ಕಾಲಗಳ ನಿರ್ಣಯವು ಧರ್ಮಸಿಂಧು

*(5ನೇ ಪುಟಕ್ಕೆ)*


## ವಾರ್ಷಿಕ ದುರ್ಗಾಪೂಜೆ



**ದಿನಾಂಕ : 2 ಅಕ್ಟೋಬರ್, 2022 ರವಿವಾರ**

**ಸ್ಥಳ : ಹವ್ಯಕರ ಸಭಾಗೃಹ,**

ದೀಪ್ತಿ ಸೊಲಿಟೇರ್, ಎಮ್. ಜಿ. ರೋಡ್ ಮತ್ತು

ಎಲ್. ಬಿ. ಎಸ್. ಮಾರ್ಗ ಜಂಕ್ಷನ್, ಘಾಟ್‌ಕೋಪರ್ (ಪ.)

**ವೇಳೆ : ಮಧ್ಯಾಹ್ನ 3.00 ರಿಂದ**

**ಕಾರ್ಯಕ್ರಮಗಳ ವಿವರ :-**

**ಲಲಿತಾ ಸಹಸ್ರನಾಮ, ಕುಂಕುಮಾರ್ಚನೆ, ಮಹಾಮಂಗಳಾರತಿ**

**ಹಿರಿಯರಿಗೆ ಸನ್ಮಾನ / Felicitation of the Elderly**

**ಪ್ರತಿಭಾ ಪುರಸ್ಕಾರ / Felicitation of the Meritorious Students**

**ಪ್ರಸಾದ ಭೋಜನ / Dinner**

**ಭಜನೆ – ಹವ್ಯಕ ಭಜನಾ ಮಂಡಳಿ**

***ಸದಸ್ಯರೆಲ್ಲರೂ ಸಕುಟುಂಬ, ಇಷ್ಟಮಿತ್ರರೊಂದಿಗೆ ಪೂಜೆಯಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ವಿನಂತಿ.***


*PAGE DONATED BY : **HEGDE HOSPITAL, CHEMBUR,** COURTESY : **DR. DINESH HEGDE***

# ಕಾಳಿದಾಸನನ್ನು ಕನ್ನಡಕ್ಕಿಳಿಸಿದ ಕನ್ನಡ ಕಣ್ಮಣಿಗಳು

✍ ಶೈಲಜಾ ಹೆಗಡೆ, ಮುಂಬಯಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)*

**ಮೇಘಸಂದೇಶ : ಪಿ. ಬಸವಣ್ಣ :**

ಮೂಲ ಕಾವ್ಯದಲ್ಲಿರುವಂತೆಯೇ, ಇವರ ಅನುವಾದ ಕಾವ್ಯವೂ ಪೂರ್ವಮೇಘ ಮತ್ತು ಉತ್ತರ ಮೇಘಗಳೆಂದು ವಿಭಾಗಿಸಲ್ಪಟ್ಟಿದೆ. ಇದು ಒಟ್ಟು ನೂರಹದಿನಾರು ಪದ್ಯಗಳನ್ನು ಹೊಂದಿದ್ದು, 1974ರಲ್ಲಿ ತ್ರಿವೇಣಿ ಪ್ರಕಾಶನ ಕೊಳ್ಳೆಗಾಲ ಪ್ರಕಾಶನದಿಂದ ಬೆಳಕು ಕಂಡಿತು. ಇದಕ್ಕೆ ತ. ಸು. ಶ್ಯಾಮರಾಯರು ಮುನ್ನುಡಿಯನ್ನು ಬರೆದಿದ್ದು, ಅಂಬಿಕಾತನಯ ದತ್ತರ ಆಶೀರ್ವಾದದ ನುಡಿಗಳೂ ಈ ಹೊತ್ತಿಗೆಯನ್ನು ಅಲಂಕರಿಸಿವೆ. "ಕೊಳ್ಳೆಗಾಲದ ನನ್ನ ತರುಣ ಮಿತ್ರರಾದ ಪಿ.ಬಸವಣ್ಣ ಇವರು ವೃತ್ತಿಯಿಂದ ವಕೀಲರು. ಸ್ವಭಾವತಃ ರಸಿಕರೂ, ಗಮಕಿಗಳೂ, ಅಭ್ಯಾಸದಿಂದ ಶಾಸ್ತ್ರಜ್ಞರು, ಮನೆತನದಿಂದ ಉಚಿತ ವಿನಯ ಸಂಪನ್ನರು. ಕನ್ನಡ ಜನಕ್ಕೆ ಕವಿ ಎಂದು ಪರಿಚಯವಾಗುವುದು ಇದೇ ಹೊಸತಲ್ಲ. ಕನ್ನಡ ಜನಕ್ಕೆ; ಮೇಘದೂತ'ದ ಅನುವಾದಗಳೂ ಹೊಸವಲ್ಲ. ವಾರ್ಧಕ ಷಟ್ಪದಿಯ ನಡಿಗೆ, ಉಡಿಗೆ, ಈ ಭಾವದ ಕಾವಿನ ವಸ್ತುವಿಗೆ ಹೊಸತು. ಮಿತ್ರರಾದ ಬಸವಣ್ಣನವರು ನಾಟ್ಯವೇಶದಿಂದ ತಮ್ಮ ಈ ರಚನೆಯನ್ನು ಓದಿ ತೋರಿಸಿದಾಗ, ಅವರ ಧ್ವನಿಗೆ ಒಂದು ಧ್ವನನ ಶಕ್ತಿಯಿದೆ ಎಂದು ಅನುಭವವಾಗುವುದು. ಕಾವೇರಿ ಶ್ರೀರಂಗ ಸಮಾಗಮ ಎಡೆ ಎಡೆಗಿದ್ದರೂ ಎಲ್ಲೆಡೆಗೂ ಇಲ್ಲ. ಅವರ ಗಮಕ, ಧಾಟಿ, ಥಾಟು ಸ್ವತಂತ್ರ ಕಾವೇರಿ, ಅವರಿಂದ ಈ ಕಾವ್ಯ ಓದಿಸಿ ಕೇಳುವ ಹಾಗೆ, ಹೇಳುವ ಭಾಗ್ಯ ಅನೇಕರಿಗೆ ಬರಲಿ. ಮೇಘದೂತದ ಧ್ವನಿ, ಪ್ರತಿಧ್ವನಿಗೆ ಕನ್ನಡ ನಾಡು ಎಡೆಗೊಡಲಿ, ಸ್ವಾಗತ ನೀಡಲಿ" ಅಂಬಿಕಾತನಯದತ್ತರ ನುಡಿಗಳು ಚೇತೋಹಾರಿಯಾಗಿವೆ. ವರಕವಿ ಬೇಂದ್ರೆಯವರ ಅನುವಾದ ಕೃತಿಯಲ್ಲಿರುವಂತೆ, ಪಿ. ಬಸವಣ್ಣ ಅವರ ಮೇಘಸಂದೇಶ ಕಾವ್ಯದಲ್ಲೂ ಪೀಠಿಕಾ ಪ್ರಕರಣವಿದೆ. ಇದರಲ್ಲಿ ಒಟ್ಟು ಇಪ್ಪತ್ತು ಪದ್ಯಗಳಿವೆ. ಮೊದಲ ಪದ್ಯದಲ್ಲಿ ಶೂಲಡಮರುಕಧಾರಿಯಾದ ತ್ರಿಶೂಲಿಯನ್ನು ಕವಿ ಸ್ತುತಿಸಿದ್ದಾರೆ.

ಶ್ರೀ ಪಾರ್ವತೀರಮಣ ಪ್ರದ್ಯುಮ್ನಮದಹರಣ
ಪಾಪ ಕೂಪೋದ್ಧರಣ ಪಾರ್ಥನುತಸಚ್ಚರಣ
ಕೂಪಾರವರಕರುಣ ಕೋಪದೂರೀಕರಣ ತಾಪತ್ರಯನಿವಾರಣ ।
ಸೈಪೀವ ಸುರಸುಗುಣ ಸೋಮನಾಗಾಭರಣ
ಶಾಪಾದಿನಿಗ್ರಹಣ ಸುಮನ ಸಾಂತಃಕರಣ
ಕೈಪಿಡಿದು ನಡೆಸೆನ್ನ ಕಾವ್ಯಮಂ ಘನಶಂಭು ಶೂಲಡಮರುಕಧಾರಣ ॥

ಸಂಸ್ಕೃತ ಭೂಯಿಷ್ಟವಾದ ಪ್ರಾಸಯುಕ್ತ ಪದಗಳಿಂದ ಕೂಡಿದ ಕಾವ್ಯ ಕೆಲವೆಡೆ ಆದಿಪ್ರಾಸವನ್ನೂ ಇನ್ನು ಕೆಲವೆಡೆ ಅಂತ್ಯಪ್ರಾಸವನ್ನೂ ಹೊಂದಿವೆ. ಭಾವ, ನಾದಗಳನ್ನು ತುಂಬಬಲ್ಲ ಸುಕುಮಾರ ವಾರ್ಧಕ ಷಟ್ಪದಿಯಲ್ಲಿ ಇದು ರಚಿತವಾಗಿದೆ.

ರಸಜೀವಭಾವವೊಡಲರ್ಥವವಯವ ಶಬ್ದ
ವಿಸರವೇ ನುಡಿಯಲಂಕರವೇ ತೊಡಿಗೆಯು ತ
ವೆ ಸುಲಕ್ಷಣವೆ ಲಕ್ಷಣ ವಿಮಳ ಪದನ್ಯಾಸ ನಡೆ ರೀತಿ ಸುಕುಮಾರತೆ ।
ರಸಿಕತನ ಸುಳಿ ಸುಖಂ ನಿಳಯವಂತಪ್ಪವೀ
ಪೊಸ ಕಾವ್ಯ ಕನ್ನಿಕೆಯ ಪಡೆದು ಪಂಪಾಂಬಿಕೆಯ
ರಸವಿರೂಪಾಕ್ಷಂಗೆ ಕೊಟ್ಟ ಹಂಪೆಯ ರಾಘವಾಂಕನೇಂ ಕೃತಕೃತ್ಯನೋ॥



ಎಂದು ರಾಘವಾಂಕನು ತನ್ನ ಕಾವ್ಯಕನ್ನಿಕೆಯ ಕುರಿತು ನುಡಿದಿದ್ದಾನೆ. 'ಕಾವ್ಯರಸವು ಅದರ ಜೀವವಾಗಿ ತುಳುಕುತ್ತದೆ. ಭಾವಕ್ಕೆ ಅದರ ಬಂಧವು ಒಡಲಿನಂತಿದೆ. ಅದರ ಲಕ್ಷಣ ಸುಲಕ್ಷಣ, ಅದರ ನಡೆಯಲ್ಲಿ ವಿಮಳ ಪದನ್ಯಾಸ ಎದ್ದು ತೋರುತ್ತದೆ. ಅದರ ರೀತಿ ಸುಕುಮಾರ ನಾದಸುಖಕ್ಕೆ ಅದು ನಿಲಯವಾಗಿದೆ. ಅದು ಕನ್ನಡ ಕಾವ್ಯರಂಗದಲ್ಲಿ ಪೊಸ ಕನ್ನಿಕೆಯಂತೆ ಆಗಮಿಸಿದೆ. ಅದನ್ನು ಪಡೆದವನು ರಾಘವಾಂಕ. ಕನ್ನಡ ನಾಡಿನ ಅಧಿದೈವತಕ್ಕೆ ಅದು ಅರ್ಪಿತ' ಎಂದು ವಾರ್ಧಕ ಷಟ್ಪದಿಯ ಲಕ್ಷಣವನ್ನು ಮೇಲಿನ ಪದ್ಯದ ಮೂಲಕ ತಿಳಿಸಿಕೊಟ್ಟಿದ್ದಾನೆ. ಷಟ್ಪದಿಗಳಲ್ಲಿಯೇ ಹಿರಿದಾದ ವಾರ್ಧಕ ಷಟ್ಪದಿಯಲ್ಲಿ ರೂಪಿಸಲ್ಪಟ್ಟ ಪಿ.ಬಸವಣ್ಣನವರ ಮೇಘಸಂದೇಶ ಕಾವ್ಯ ಅನುವಾದ ಕಾವ್ಯಗಳಲ್ಲಿ ತನ್ನದಾದ ಹಿರಿಮೆಯನ್ನು ಪಡೆದುಕೊಂಡಿದೆ. ಇವರ ಕಾವ್ಯದ ಪೀಠಿಕಾ ಪ್ರಕರಣ ವೈವಿಧ್ಯಮಯವಾದ ಸ್ತುತಿ ಪದ್ಯಗಳನ್ನು ಒಳಗೊಂಡಿದೆ. ಕವಿಯು ನವರಸಭರಿತ ಶಂಭುವನ್ನು ಕಾಣುವ ಪರಿ ಅದ್ಭುತವಾಗಿದೆ.

ಗಿರಿಜೆಯಿಂ ಶೃಂಗಾರ ಗಂಗೆಯಿಂದುರುಹಾಸ್ಯ
ಕರದೋಡಿನಿಂ ಕರುಣ ಪಿಡಿದಾಯುಧಗಳಿಂ
ವರವೀರ ಮೊರೆಯುವ ಮರುಳ್ತಂಡದಿಂ ರೌದ್ರ ಧರಿಸಿರ್ಪನಾಗಂಗಳಿಂ ।
ಪರಭಯಾನಕ ರುಂಡಮಾಲೆಯಿಂ ಬೀಭತ್ಸ
ಮೆರೆವ ಫಾಲಾಕ್ಷದಿಂದದ್ಭುತಂ ಚಂದ್ರನಿಂ
ಕರಮೆಸೆವ ಶಾಂತಮಿಂತೆಸೆವ ನವರಸಭರಿತಬಶಂಭುವೆಮ್ಮಂ
ಸಲಹುಗೆ॥

ಇಲ್ಲಿ ಸಾಹಿತ್ಯದಲ್ಲಿಯೂ ಶಿವನಿದ್ದಾನೆ. ನವರಸಭರಿತನಾದ ಅವನು ಸರ್ವವ್ಯಾಪಿ ಮಹೇಶ್ವರನು. ಸಾಹಿತ್ಯದಲ್ಲಿಯೂ ಸಾರೂಪ್ಯ, ಸಾಮೀಪ್ಯ, ಸಾಲೋಕ್ಯ, ಸಾಯುಜ್ಯ ಸ್ವರೂಪನಾದ ಶಿವನನ್ನು ಕಾಣುವ ಕವಿಯ ವಿಧಾನ ಅನ್ಯಾದೃಶವಾದುದು. ಅಂತೆಯೇ, ಕನ್ನಡಾಂಬೆಗೆ ಛಂದಸ್ಸಿನ ಆಭರಣಗಳನ್ನು ತೊಡಿಸಿ ಶೃಂಗರಿಸುವ ರೀತಿಯೂ ರೋಚಕವಾದುದು.

ವರರಗಳೆ ರಾಗಟೆಯ ವಚನ ಬೈತಲೆಬಟ್ಟು
ಸರಸ ಚೌಪದಿ ನತ್ತು ಕಂದವದು ಕೆನ್ನೆಸರ
ಶರಷಟ್ಪದಿಗಳಡ್ಡಿಕೆಯು ತಾಳಿವೃತ್ತಗಳು ನಾಗಮುರಿ ಮೇಣ್ವಂಕಿಯು ।
ಕರಮೆಸೆವ ಸಾಂಗತ್ಯ ಕೈಕಡಗ ಪೈಜಣವು
ಸಿರಿಗದ್ಯ ವೊಡ್ಯಾಣ ತ್ರಿಪದಿ ತಿಲಕವನಾಂತು
ಮೆರೆವ ಸಿರಿಗನ್ನಡಮ್ಮನ ಚರಣ ಸರಸಿಜಕೆ ಶಿರಬಾಗಿ
ಕರಜೋಡಿಪೇಂ॥

ಮೇಲಿನ ಪದ್ಯದಲ್ಲಿ ಉಲ್ಲೇಖಿಸಿದ ಪ್ರತಿಯೊಂದು ಛಂದಸ್ಸು ಕೂಡಾ ಸಿರಿಗನ್ನಡಾಂಬೆಯ ಸೊಬಗನ್ನು ವೃದ್ಧಿಗೊಳಿಸಿವೆ. ಭಾಷೆಗೆ ಛಂದಸ್ಸೇ ಅಲಂಕಾರ. ಭಾಷಾಸೌಂದರ್ಯಕ್ಕೆ ಛಂದಸ್ಸು ಬೇಕೇಬೇಕು. ಕವಿ ತನ್ನ ಕಾವ್ಯ ಕುಲುಮೆಯಲ್ಲಿ ಲೋಕಾನುಭವವನ್ನು ಕರಗಿಸಿ, ಭಾವ ನಾದಗಳನ್ನು ಬೆರೆಸಿ, ಶಬ್ದಾರ್ಥಗಳ ಬಡಿತದಿಂದ, ಸಮುಚಿತ ಗತಿಯಲ್ಲಿ ಅದಕ್ಕೊಂದು ರೂಪವನ್ನು ಕೊಡುತ್ತಾನೆ. ಆ ರೂಪವೇ ತೊಡುಗೆಯ ಸ್ವರೂಪವನ್ನು ತಾಳಿ ಭಾಷೆಯನ್ನು ಸಮೃದ್ಧಗೊಳಿಸುತ್ತದೆ. ಭಾಷೆಯನ್ನು ಬೆಳೆಸುವಲ್ಲಿ ಬೆಳಗಿಸುವಲ್ಲಿ ಕವಿಯ ಪಾತ್ರ ಹಿರಿದಾದುದು. ಇದನ್ನೇ ಮೇಲಿನ ಪದ್ಯದಲ್ಲಿ

*PAGE DONATED BY : **SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

ವೈಭವೀಕರಿಸಲಾಗಿದೆ. 'ಆಡದಲೆ ಮಾಡುವನು ರೂಢಿಯೊಳಗುತ್ತಮನು, ಆಡಿ ಮಾಡುವವನು ಮಧ್ಯಮನು, ಆಡಿಯೂ ಮಾಡದವನು ಅಧಮ ತಾ ಸರ್ವಜ್ಞ' ಎಂಬ ಸರ್ವಜ್ಞನ ವಚನವನ್ನು ಹೋಲುವ ಪದ್ಯ, ತೊಡರುಗಳು ಬರುವವೆಂದು ಹೆದರಿ ಕಾರ್ಯೋನ್ಮುಖನಾಗದವನು ಅಧಮನು, ಕಾರ್ಯ ಮಧ್ಯದಲ್ಲಿ ತೊಡರು ಬಂತೆಂದು ಕಾರ್ಯವನ್ನು ಅರ್ಧದಲ್ಲಿಯೇ ನಿಲ್ಲಿಸುವವನು ಮಧ್ಯಮನು, ಅಡಿಗಡಿಗೆ ತೊಡರುಬಂದಡರಿದರೂ ಹಿಡಿದ ಕಾರ್ಯವನ್ನು ಕೈಬಿಡದವನು ಉತ್ತಮನು ಎಂಬ ಲೋಕನೀತಿಯನ್ನು ಪ್ರತಿಪಾದಿಸುತ್ತದೆ. ಅದು ಇಂತಿದೆ,

ತೊಡರುಗಳು ಬಹವೆಂದಧಮನಾವ ಕಾರ್ಯದೊಳು
ತೊಡಗನೈ ತೊಡಗಿರ್ಪ ಕಾರ್ಯದೊಳ್ನಡು ನಡುವೆ
ತೊಡರಡರೆ ಮಧ್ಯಮನು ಕಾರ್ಯಮಂ ಕೈಬಿಟ್ಟು ತಲೆಗೆ ಕೈಯಿಟ್ಟು ಕೂರ್ವಂ।
ತೊಡರು ಬಂದಡಿಗಡಿಗೆ ಹೊಡೆದರುಂ ಉತ್ತಮನು
ತೊಡಗಿರ್ಪ ಕಾರ್ಯ ಕೈಬಿಡನೆಂಬರದರಿಂದೆ
ತೊಡರುಗಳು ಬಂದರೀ ಕಾವ್ಯ ರಚನೆಯ ಬಿಡದೆ ಮತಿ ಕೊಡುಗೆ ತೊಡರೊಡೆಯನು ॥

ವಿದ್ಯಾಧಿದೈವತವಾದ ಸರಸ್ವತಿಯ ಸ್ತುತಿಯೊಡನೆ ಪೂರ್ವ ಕವಿಗಳ ಸ್ತುತಿಯನ್ನೂ ಪಿ. ಬಸವಣ್ಣ ಅವರು ಮಾಡಿದ್ದಾರೆ. ಪೂರ್ವ ಕವಿಗಳನ್ನು ಗೌರವಿಸುವುದರ ಮೂಲಕ ತಮ್ಮ ವಿದ್ಯಾ ವಿಧೇಯತೆಯನ್ನು ದರ್ಶಿಸಿದ್ದಾರೆ. ಕಾವ್ಯರಚನಾಕಾರರಿಗೆ ಇದೊಂದು ಉತ್ತಮ ದಿಕ್ಸೂಚಿಯಾಗಿದೆ.

ಧರೆಯೊಳತಿಶಯದ ಶೃಂಗಾರರತ್ನಾಕರವ
ನೊರೆದ ಕವಿಕಾಮಂಗೆ ಕಾವ್ಯಾವಲೋಕನವ
ವಿರಚಿಸಿದ ನಾಗವರ್ಮಂಗೆ ರಸರತ್ನಾಕರವ ಬರೆದ ಸಾಳ್ವಕವಿಗೆ ।
ಕರುನಾಡ ಭಾಷೆಯೊಳು ವಿಬುಧಜನ ಮೆಚ್ಚುವೋ
ಲ್ಪರಿಪರಿಯ ರಸವಿಷಯ ಕಾವ್ಯಗಳ ರಚಿಸುವತಿ
ಸರಸಕವಿತಾ ಕೌಶಲವನಿತ್ತ ಸರಸತಿಯ ಸಿರಿಪದಕೆ ಶರಣು ಶರಣು ॥

ಹೀಗೆಯೇ ಗಿರಿಜಾಸ್ತುತಿ, ಹರಿಸ್ತುತಿ, ನಂಬಿಯಣ್ಣನಸ್ತುತಿ, ಅಕ್ಕಮಹಾದೇವಿಯಸ್ತುತಿ, ಕಾಳಿದಾಸನ ಸ್ತುತಿಗಳಲ್ಲದೆ, ಕಾಳಿದಾಸನ ಶಾಕುಂತಲವನ್ನು ಕನ್ನಡಿಸಿದ ಬಸವಪ್ಪಶಾಸ್ತ್ರಿ, ಮೇಘದೂತ ಕಾವ್ಯವನ್ನು ಅನುವಾದಿಸಿದ ಕುಕ್ಕೆ ಸುಬ್ರಹ್ಮಣ್ಯಶಾಸ್ತ್ರಿ, ಪರಮೇಶ್ವರಭಟ್ಟ, ಕಮಗೋಡು ನರಸಿಂಹಶಾಸ್ತ್ರಿ, ಗೋಪಾಲಕೃಷ್ಣ ಪಾಲೆಪ್ಪಾಡಿ ಮುಂತಾದ ಕವಿಶ್ರೇಷ್ಠರನ್ನೂ ಈ ಕಾವ್ಯದಲ್ಲಿ ವಿಶೇಷವಾಗಿ ಗೌರವಿಸಲಾಗಿದೆ. 'ಕರುನಾಡ ಜನರೆಲ್ಲ ಚಪ್ಪರಿಸಿ ಸವಿಯಲೆನೆ ಬಸವಣ್ಣ ಕನ್ನಡಿಸಿದಂ' ಎಂದು ತಮ್ಮ ಕಾವ್ಯೋದ್ದೇಶವನ್ನು ವ್ಯಕ್ತಪಡಿಸುತ್ತ ಬಸವಣ್ಣನವರು ಮೇಘದೂತ ಕಾವ್ಯದ ಮಹತ್ವವನ್ನೂ ವಿವರಿಸಿದ್ದಾರೆ. ಶೃಂಗಾರವೆನ್ನುವುದೊಂದು ತುಚ್ಛ ಭಾವನೆಯೆಂದು ಅದನ್ನು ಹೀಗಳೆಯುತ್ತ, ಅಂತರಂಗದಲ್ಲಿ ಶೃಂಗಾರಕ್ಕಾಗಿ ಹಪಹಪಿಸುತ್ತ, ಮಾತು ಮತ್ತು ಕೃತಿಗಳಲ್ಲಿ ಭಿನ್ನರಾಗಿ ನಡೆದುಕೊಳ್ಳುವ ಬೂಟಾಟಿಕೆಯ ಜನರಿಗೆ ಕಿವಿ ಮಾತೆಂಬಂತೆ ಶೃಂಗಾರದ ಮಹಿಮೆಯನ್ನು ಕವಿ ಬಣ್ಣಿಸಿದ್ದಾರೆ. ಕಂಗೊಳಿಸುವ ಸೃಷ್ಟಿಗೆ ಶೃಂಗಾರವೇ ಆಧಾರವು. ಸಾತ್ವಿಕನ ಶೃಂಗಾರವು ಬುದ್ಧಿಗೆ ಸಂಸ್ಕಾರ ನೀಡುವುದೆಂದೂ, ಶೃಂಗಾರವನ್ನು ಅಲ್ಲಗಳೆಯುವುದು ಸರಿಯಲ್ಲವೆಂದು ಕವಿ ನುಡಿಯುತ್ತಾರೆ. ಕಾಳಿದಾಸನ ಮೇಘದೂತ ಕಾವ್ಯದಲ್ಲಿಯೂ ಕವಿ ಕಾಳಿದಾಸನು ಸಾತ್ವಿಕ ಪ್ರೇಮವನ್ನು ಎತ್ತಿಹಿಡಿದಿದ್ದಾನೆಂಬ ತಥ್ಯವನ್ನು ಸಾರಿದ್ದಾರೆ.

*(ಮುಂದುವರಿಯುವುದು)*

---

*(3ನೇ ಪುಟದಿಂದ)*

ಮುಂತಾದ ಗ್ರಂಥಗಳಲ್ಲಿ ಮಾಡಲ್ಪಟ್ಟಿದೆ. ನೂತನೋಪಾಕರ್ಮಕ್ಕೆ ಗುರು ಶುಕ್ರಾಸ್ತಾದಿ ದೋಷಗಳಿರಕೂಡದೆಂದು ವಿಶೇಷ ಹೇಳಿದ್ದಾರೆ.

ಈ ದಿನ ಆಯಾ ಶಾಖೆಯವರು ತಮತಮಗೆ ಅನುಕೂಲವಿರುವ ತಮ್ಮ ಊರಿನ ದೇವಾಲಯದಲ್ಲಾಗಲಿ ಅಥವಾ ಒಂದು ಪವಿತ್ರಸ್ಥಳದಲ್ಲಾಗಲಿ ಕೂಡಿ ಆಚಾರ್ಯನಿಂದ ವಿಧಿಪೂರ್ವಕ ತಯಾರಿಸಲ್ಪಟ್ಟ (ಆಕಳ ಹಾಲು, ಮೊಸರು, ತುಪ್ಪ, ಮೂತ್ರ, ಸೆಗಣೆಗಳನ್ನು ಕೂಡಿಸಿ ತಯಾರಿಸಲ್ಪಟ್ಟ) ಪಂಚಗವ್ಯವನ್ನು ಪ್ರಾಶನ ಮಾಡಿ ಮಂತ್ರ ಸ್ನಾನಾದಿಗಳಿಂದ ದೇಹ ಶುದ್ಧಿಯನ್ನು ಹೊಂದುವರು. ಆಮೇಲೆ ಉತ್ಸರ್ಜನ (ವೇದಗಳನ್ನು ಬಿಡೋಣ), ಉಪಾಕರ್ಮ (ವೇದಸ್ವೀಕಾರ), ಯಜ್ಞೋಪವೀತಧಾರಣಗಳನ್ನು ಮಾಡುವರು. ಆ ಮೇಲೆ ಬ್ರಹ್ಮಯಜ್ಞವನ್ನು ಮಾಡಿ ವಿಧಿಯನ್ನು ಮುಗಿಸಿ ಈ ದಿನ ಏಕಭುಕ್ತ ಮಾಡುವರು. ಈ ವಿಧಿಯು ಬ್ರಹ್ಮಚಾರಿಗಳಿಗೂ, ಗ್ರಹಸ್ಥರಿಗೂ ಮಾತ್ರ ಸಂಬಂಧಪಟ್ಟದ್ದೆಂಬುದು ಸ್ಪಷ್ಟವೇ ಸರಿ. ಪುರಾಣ ಮತವಾದಿಗಳಾದ ಹಿಂದುಗಳಿಗೆ ಈ ವಿಧಿಯು ಪವಿತ್ರವಾಗಿ ತೋರುವುದು ಸ್ವಾಭಾವಿಕವೇ. ಆದರೆ ಉಪನಯನ ಸಂಸ್ಕಾರಕ್ಕೇ ಮಹತ್ವ ಕೊಡದ ಈಗಿನ ಸುಧಾರಕರು ಈ ಶ್ರಾವಣೀ ವಿಧಿಯನ್ನಾದರೂ ಅಷ್ಟೇ ಅನಾದರದಿಂದ ಕಾಣುವರು. ಇದಕ್ಕೆ ಕಾಲಮಾಹಾತ್ಮ್ಯವೆನ್ನಬೇಕಾಗಿದೆ.

ಈಗಿನ ಕಾಲದಲ್ಲಿ ಶ್ರಾವಣಿಯೆಂದರೆ ಸಾಮಾನ್ಯವಾಗಿ ಯಜ್ಞೋಪವೀತ ಧಾರಣವೆಂಬ ಕಲ್ಪನೆಯಾಗಿದೆ. ಆದರೆ ಎಷ್ಟೋ ಧರ್ಮಕೃತ್ಯಗಳ ಆರಂಭದಲ್ಲೂ ಆಶೌಚನಿವೃತ್ತಿಯಲ್ಲೂ ಯಜ್ಞೋಪವೀತ ಧಾರಣವನ್ನು ಹೇಳಿರುವದರಿಂದ ಇಂದಿನ ವಿಧಿಯಲ್ಲಿ ಯಜ್ಞೋಪವೀತ ಧಾರಣವೇ ಮುಖ್ಯ ಅಂಗವೆಂದು ತಿಳಿಯುವುದು ಸಮಂಜಸವಲ್ಲ. ಇನ್ನುಳಿದ ಉತ್ಸರ್ಜನ, ಉಪಾಕರ್ಮಗಳು ಪರಸ್ಪರ ವಿರುದ್ಧವಾದವುಗಳು. ಒಂದೇ ದಿನ ವೇದಪರಿತ್ಯಾಗವೂ, ವೇದಗ್ರಹಣವೂ ಅಸಮಂಜಸವಾಗುವವು. ಉಪಾಕರ್ಮವೆಂಬದು ವೇದಗ್ರಹಣ ವಿಧಿಯು. ಈ ವಿಧಿಯಾದ ಹೊರತು ಮೌಂಜೀಬಂಧನವನ್ನು ಹೊಂದಿದ ವಟುವಾದರೂ ವೇದಪಾಠ ಮಾಡಲು ಅಧಿಕಾರಿಯಾಗನು. ಈ ಪ್ರಕಾರ ವೇದಗ್ರಹಣಕ್ಕೆ ಶ್ರಾವಣ ಶು. 15 ಅಥವಾ ಪೌರ್ಣಿಮೆಯೇ ಮೊದಲಾಗಿ ಮಳೆಗಾಲದ ಪ್ರಶಾಂತವಾದ ಕಾಲವನ್ನು ದೂರದರ್ಶಿಗಳಾದ ಆರ್ಯರು ನಿಶ್ಚೈಸಿರಬೇಕೆಂದು ಸ್ಪಷ್ಟವಾಗುತ್ತದೆ. ಅಂತು ಈ ದಿನದ ಮುಖ್ಯ ವಿಧಿಯು ಉಪಾಕರ್ಮವಾಗಿರಬೇಕು.

ಉತ್ಸರ್ಜನವೆಂಬ ವಿಧಿಯು ಮಾಘಮಾಸದಲ್ಲಿ ಅಂದರೆ ಉಪಾಕರ್ಮವಾದ ಆರೇಳು ತಿಂಗಳ ತುರುವಾಯದ ವಿಧಿಯಿರಬೇಕು. ಸದ್ಯಕ್ಕೆ ಮುಖ್ಯೋದ್ದೇಶಗಳೆಲ್ಲ ನಷ್ಟಪ್ರಾಯವಾಗಿ ಇವೆರಡು ವಿಧಿಗಳಷ್ಟೇ ಸಮಾನ ತಂತ್ರದಿಂದ ಒಂದೇ ಆಸನದಲ್ಲಿ ಸಾಗಹತ್ತಿವೆ. ಅಂತೂ ಮಳೆಗಾಲದಿಂದ ಆರು ತಿಂಗಳು ವೇದಾಧ್ಯಯನಾದಿಗಳನ್ನು ಮಾಡುವುದೂ, ಮಾಘದಿಂದ ಅಂದರೆ ಬೇಸಿಗೆಯ ಪ್ರಾರಂಭದಿಂದ ಇತರ ಕಲೆಗಳ ಜ್ಞಾನಕ್ಕೂ ಕೃಷಿಗೂ ಯತ್ನಿಸುವುದೂ ಪ್ರಾಚೀನರ ಪದ್ಧತಿಯಾಗಿತ್ತೆಂದು ತಿಳಿದುಬರುತ್ತದೆ.

*(ಮುಂದುವರಿಯುವುದು)*

*PAGE DONATED BY : **SHRI N. R. HEGDE, DOMBIVLI***

# The Essence of Bhagavad-Gita

✍ **Shraddha Hegde** **(BE-Engg)**



**Shraddha Traya Vibhaga Yoga :** Shri Krishna had concluded the last chapter by saying that knowledge of the scriptures helps in overcoming ignorance and guides us on our spiritual journey. So, Arjuna wanted to know about the state of those people who use faith to guide their actions instead of scriptures. Shri Krishna describes how human beings shape their existence with the three Gunaas i.e., Sattva, Rajas and Tamas right from the food one intakes, sacrifices he performs or charity he gives.

Every aspect of one's personality is colored with the combination of gunas he possesses. Men worship Gods in the mode of goodness. Men in the mode of passion worship the demons. Similarly, those in the mode of ignorance choose ghosts and spirits. Even the food one prefers is of three kinds. Sattvika people like food that improves health and increases appetite, joy, strength, and longevity. Such food is also tasty, not very dry, cooked with balanced spices, nutritious, and pleasing to the heart. The food Rajasika people prefer is extremely bitter, sour, salty, dry, hot in temperature and with the spices that burn the tongue and the body. Such food causes pain, worries and disease. Tamasika people like food that is ill-cooked, tasteless, stale, left-over, and filthy. These categorizations is done for sacrifices, austerity, and charities as well. The words "Om Tat Sat" have been declared as symbolic representation of the Brahman, from the beginning of creation. Therefore, the followers of the Vedas always begin all spiritual practices by the scriptures with the utterance of "Om". People seeking liberation, uttering the word "Tat", perform yajna, tapa, and charity only for spiritual development. Keeping in mind that "Tat" means 'everything belongs to Brahman,' they do not seek any worldly gain from these. The word "Sat" is used whenever one refers to the Ultimate Reality or something good. Through this chapter, we are urged by Shri Krishna to reduce and ultimately stop rajasic and tamasic actions and cultivate sattvik actions. This will purify our mind and make us fit for imbibing the spiritual knowledge.

*(To be continued...)*

**ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ**

**ಹಾಗೂ**

**ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ**

**ಇವರ ಸಂಯುಕ್ತ ಆಶ್ರಯದಲ್ಲಿ**

## "ಸೂರಿ ಪರ್ವ - ಕರ್ಕಿ ವೆಂಕಟರಮಣ ಶಾಸ್ತ್ರಿ ಸೂರಿ ಜೀವನ ಸಾಧನೆ"

**ಕೃತಿ ಬಿಡುಗಡೆ ಕಾರ್ಯಕ್ರಮ**

ಲೇಖಕರು : **ಶಶಿಕಲಾ ಹೆಗಡೆ**





**ದಿನಾಂಕ : 8 ಅಕ್ಟೋಬರ್, 2022 • ಸಮಯ : ಬೆಳಿಗ್ಗೆ 10-45 ರಿಂದ**

**ಸ್ಥಳ : ಹವ್ಯಕರ ಸಭಾಗೃಹ,** ದೀಪ್ತಿ ಸೊಲಿಟೇರ್, 4ನೆಯ ಮಹಡಿ,
ಎಮ್.ಜಿ. ರೋಡ್ ಮತ್ತು ಎಲ್.ಬಿ.ಎಸ್. ಮಾರ್ಗ್ ಜಂಕ್ಷನ್,
ಹಳೆಯ ಪೋಸ್ಟ್ ಆಫೀಸ್ ಹತ್ತಿರ, ಘಾಟ್‌ಕೋಪರ್ ಪಶ್ಚಿಮ, ಮುಂಬಯಿ - 400 086.

**ಪುಸ್ತಕ ಬಿಡುಗಡೆ –** ಮುಖ್ಯ ಅತಿಥಿ : **ಡಾ. ಜಿ. ಎಲ್. ಹೆಗಡೆ** (ಅಧ್ಯಕ್ಷರು, ಯಕ್ಷಗಾನ ಅಕಾಡೆಮಿ)
ಕೃತಿ ಬಿಡುಗಡೆ : **ಡಾ. ಜಿ. ಎನ್. ಉಪಾಧ್ಯ** (ಪ್ರಾಧ್ಯಾಪಕರು, ಮುಖ್ಯಸ್ಥರು, ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ)
ಅಧ್ಯಕ್ಷತೆ : **ಶ್ರೀ ಶಿವಕುಮಾರ್ ಭಾಗವತ್** (ನ್ಯಾಯವಾದಿ, ಅಧ್ಯಕ್ಷರು, ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ)
ಕಾರ್ಯಕ್ರಮ ಸಂಯೋಜನೆ, ನಿರೂಪಣೆ : **ಡಾ. ಪೂರ್ಣಿಮಾ ಎಸ್. ಶೆಟ್ಟಿ** (ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ)
ಕೃತಿಯ ಕುರಿತು : **ಶ್ರೀಮತಿ ಅಮಿತಾ ಭಾಗವತ್** (ಸಂಪಾದಕರು, ಹವ್ಯಕ ಸಂದೇಶ)

**ಸೂರಿ ನಮನ –** ಗಮಕ ವಾಚನ : **ಕಲಾ ಭಾಗ್ವತ್, ತುರಂಗ ಭಾರತದ ಆಯ್ದ ಪದ್ಯಗಳು**
ಕಾವ್ಯ ವಾಚನ : **ಶೈಲಜಾ ಹೆಗಡೆ, ಶಂಕರ ಸಂಹಿತೆಯ ಆಯ್ದ ಭಾಗಗಳು**
ಓದಾಣ : **ಶಶಿಕಲಾ ಹೆಗಡೆ, 'ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ' ನಾಟಕದ ಆಯ್ದ ಭಾಗ.**

**❖ ಪ್ರೀತಿಭೋಜನ ❖**

**❖ ಎಲ್ಲರಿಗೂ ಆದರದ ಆಮಂತ್ರಣ ❖**

*PAGE DONATED BY :* ***AKADAS & FAMILY***

# HAVYAKA WELFARE TRUST, WOMEN WELFARE CELL

B-207, Valmiki Apts., Near Pharmacy College, Sundar Nagar, Kalina, Vidyanagari P. O., Mumbai - 400 098. ✆ 2665 2591

## APPLICATION FORM - EDUCATIONAL AID

*(Students are requested to fill up the form in neat legible handwriting to obtain educational aid. Forms should reach our office before 31st Oct. 2022. Application form should be accompanied by recommendation letter)*

Date : ______________________

Name :______________________________________________________________

(Surname) (First name) (Middle/Father's/Husband's name)

Sex : Male / Female Date of Birth : ______________________

Permanent Address : ______________________________________________________

______________________________________________________________

Pin code : ____________ Contact Nos : ______________________________________

**Family Detail :**

| | Father / Guardian | Mother / Guardian |
|---|---|---|
| Name | | |
| Age | | |
| Occupation | | |
| Contact Nos. | | |
| Signature | | |

**Education Detail :**

Name of last examination given : ______________________________________

Marks obtained : ________/_________ Percentage obtained : _________%

Present study course being undertaken and Name of university :

______________________________________________________________

______________________________________________________________

Approximate cost : (in Rupees)

Tuition fees :______________/year Books & Stationery :________________/year

Lodging & Boarding :__________________/year Misc/Personal :____________________/year

Signature of applicant : ______________________________________________

**RECOMMENDATION DETAILS :**

Name : ______________________________________ Contact nos. : ____________________

Email : ______________________________________

Signature of Referee

Documents to be submitted with application form: (*cancelled documents will not be accepted*)

Photo & Address proof (Passport/Birth certificate/UID (Aadhaar card))
Educational documents (Mark Sheets and Admission letter duly attested)
Income Certificate

*PAGE DONATED BY : **SHRI ROKESH HEGDE & FAMILY, DAHISAR***

# ಮೃಗನಯನಾ

✍ ಡಾ. ಜಯಂತ ಕಾಯ್ಕಿಣಿ

*(ಕಳೆದ ಸಂಚಿಕೆಯಿಂದ)*

ಕಿಕ್ಕಿರಿದಿದ್ದರೂ ಒಬ್ಬರಿಗೊಬ್ಬರು ಅವಕಾಶ ಮಾಡಿಟ್ಟುಕೊಂಡೇ ಹಿಂದೆ ಮುಂದೆ ಸರಿಯುತ್ತಿತ್ತು ಸಂದಣಿ. ಅದರ ನಡುವೆಯೇ ಹಸ್ತಾಕ್ಷರ, ಬಾಬಾ ಇಬ್ಬರೂ ತೀರದ ಗುಂಟ ಉದ್ದೇಶವಿಲ್ಲದೆ ಮೆಲ್ಲಗೆ ಅಲೆದರು. ತುಂಬಾ ನಡೆದ ಮೇಲೆ ಒಂದು ಕಡೆ ಕೂತರು. ಪುಟ್ಟ ಪುಟ್ಟ ಮಕ್ಕಳು ಮಾರಲೆಂದೇ ಕೈಲಿ ಪುಟ್ಟ ಶೇಂಗಾ ಪೊಟ್ಟಣಗಳನ್ನು ಹಿಡಿದುಕೊಂಡು-'ಬೋಲೋ ಟೈಂಪಾಸ್...ಶೇಂಗಾ...' 'ಟೈಂ ಪಾಸ್...ಶೇಂಗಾ...' ಎಂದು ಸುಳಿಯುತ್ತಿದ್ದರು. ಹಿಂದೆ ಭೇಲ್‌ಪುರಿ, ಪಾನಿಪುರಿಗಳ ಮಳಿಗೆಗಳಿದ್ದವು. ಜನರನ್ನು ಸೆಳೆಯಲೆಂದೇ ಪ್ರಖರ ದೀಪಗಳನ್ನು ಹೊತ್ತಿಸಿದ್ದ ಆ ಮಳಿಗೆಗಳಿಂದ ಪುಟ್ಟ ಮಕ್ಕಳು ಆರ್ಡರ್ ತೆಗೆದುಕೊಳ್ಳಲು ಬರುತ್ತಿದ್ದರು. 'ಬೋಲೋ ಭಾಯ್ ಬೋಲೋ...ಭೇಲ್...ಟೈಂ ಪಾಸ್...' ಎನ್ನುತ್ತಿದ್ದರು. ಅವರ ಬಾಯಿಂದ 'ಟೈಂ ಪಾಸ್' ಶಬ್ದ ತುಂಬ ಹಿತವಾಗಿ, ನಿರುಪದ್ರವಿಯಾಗಿ ಕೇಳಿ ಬರುತ್ತಿತ್ತು. ಆ ಮಕ್ಕಳ ಮೇಲೆ ಅಕ್ಕರೆ ಬಂದಂತಾಗಿ ಬಾಬಾ 'ಏನಾದ್ರೂ ತಗೊಳ್ಳುವಾ..ಹೇಳು ನೀನೇ' ಎಂದ. ರಗ್ಡಾ ಪ್ಯಾಟಿಸ್ ಹೇಳಿ ಆಯ್ತು. ಕೂತ ಜಾಗದಿಂದ ಸಮುದ್ರ ಹಾಗೆಯೇ ಕಾಣುತ್ತಿತ್ತು. 'ಎಲ್ಲಾ ನದಿಗಳೂ ಕೊನೆಗೂ ಇದರಲ್ಲೇ ಅಲ್ಲಾ?' ಎಂದ ಬಾಬಾ. ಹಸ್ತಾಕ್ಷರ 'ಹಾಗಂತ ಇದರ ನೀರು ಸಿಹಿ ಇರುವುದಿಲ್ಲ. ಉಪ್ಪುಪ್ಪು' ಎಂದಾಗ, ಬಾಬಾ 'ಅದರಲ್ಲೇನಾಯ್ತು ಅಂಥ ದೊಡ್ಡ ವಿಷಯ ಅಲ್ಲ ಅದು. ಇಲ್ದಿದ್ರೆ ಉಪ್ಪು ಎಲ್ಲಿಂದ ಸಿಗಬೇಕು ನಮಗೆ?' ಎಂದು ಕೆಲ ಹೊತ್ತು ಸುಮ್ಮನೆ ಕೂತ. 'ನಾನು ಈ ಮಕ್ಕಳ ವಯಸ್ಸಿನವನಾಗಿದ್ದಾಗ, ಊರಿನ ದೇವಳದಲ್ಲಿ ದಾಸೋಹ ಇದ್ದಾಗ ಹೆಚ್ಚುಳಿದ ಅನ್ನವನ್ನು ಹಂಚುತ್ತಿದ್ದರು. ಅದನ್ನು ತಪೇಲಿಯಲ್ಲಿ ತಕೊಂಡು ಬರ್ತಿದ್ದೆವು. ಅದಕ್ಕೆ ಆಯಿ ಬಿಸಿನೀರು ಮತ್ತು ಉಪ್ಪು ಕಲೆಸಿಕೊಡುತ್ತಿದ್ದಳು. ಆಹಾ ಏನು ರುಚಿ. ನೆನಪಾದರೆ ಸಾಕು ಈಗಲೂ...' ಎಂದು ಮತ್ತೆ ಸುಮ್ಮನೆ ಕೂತ. ಕ್ಷಿತಿಜವನ್ನೇ ನೋಡುತ್ತ ರಗ್ಡಾ ಪ್ಯಾಟಿಸ್ ನಸುಗತ್ತಲಲ್ಲಿ ತಿಂದರು. ತಿಂದಾದ ಮೇಲೆ ಹಣ ಕೊಡಲು ಹಸ್ತಾಕ್ಷರ ಆ ಅಂಗಡಿಗೆ ಹೋದಾಗ ಬಾಬಾ ಖಾಲಿ ಪ್ಲೇಟು ಒಯ್ಯುತ್ತಿದ್ದ ಪೋರನಿಗೆ 'ಏ ಟೈಂಪಾಸ್ ನಿಲ್ಲು ಒಂದು ನಿಮಿಷ' ಎಂದು ಪೈಜಾಮದ ಕಿಸೆಯಿಂದ ದುಡ್ಡು ತೆಗೆದುಕೊಟ್ಟ. ಆ ಪೋರ ಕತ್ತಲಲ್ಲೂ ಅದನ್ನು ಕಣ್ಣಿಗೆ ಹತ್ತಿರ ಹಿಡಿದು ಮಿಕಿಮಿಕಿ ನಿಟ್ಟಿಸಿ ನೋಡಿ ಕಿಸೆಗೆ ಸೇರಿಸಿಕೊಂಡು ಮರೆಯಾದ. ಹಸ್ತಾಕ್ಷರ ಬಂದವನೇ ಕೈ ನೀಡಿ ಬಾಬಾನನ್ನು ಎಬ್ಬಿಸಿದ. ಇಬ್ಬರೂ ತಮ್ಮ ತಮ್ಮ ಉಸುಕನ್ನು ಕೊಡವಿಕೊಳ್ಳುತ್ತ ರಸ್ತೆಯ ಕಡೆಗೆ ಚಲಿಸಿದರು. ಆಗ ಹಸ್ತಾಕ್ಷರನಿಗೆ ಈ ಸಾಲು ಮಳಿಗೆಗಳಲ್ಲೇ ಎಲ್ಲೋ ಒಂದು ಕಡೆ ಬಾಲಾ ತನ್ನದೇ ಆಮ್ಲೆಟ್ ಕಾರ್ನರ್ ನಡೆಸಿರಬಹುದು ಅನಿಸಿತು.

ರಾತ್ರೆ ಮಲಗುವ ಮುನ್ನ ಸಾನೆ ಕೆಳಗೆ ಹೋಗಿ ಐಸ್‌ಕ್ರೀಮ್ ಪ್ಯಾಕು ತಂದ. ವ್ಯವಸ್ಥಿತವಾಗಿ ತೆಗೆದು ಸಣ್ಣ ಸಣ್ಣ ವಾಟಗದಲ್ಲಿ ಹಾಕಿ ಚಮಚೆಯೊಂದಿಗೆ ಕೊಟ್ಟು 'ಕಾಕಾ ನಿಮಗೇನು ನೋಡುವುದಿದೆ ಹೇಳಿ. ನಾಳೆ ನೋಡಿಬಿಡುವಾ. ನನ್ನ ವೀಕ್ಲೀ ಆಫ್ ಇದೆ' ಎಂದ. ಬಾಬಾ 'ಏನೂ ಇಲ್ಲಪ್ಪ...ಎಲ್ಲಾ ಒಮ್ಮೆಲೇ ಗಪಗಪ ನೋಡಿಬಿಟ್ರೆ ಜೀರ್ಣ ಆಗಬೇಕಲ್ಲಪ್ಪಾ' ಎಂದ. ಸಾನೆ ಪ್ರತಿ ರಾತ್ರೆ ಮಲಗುವ ಮುನ್ನ ತನ್ನ ಮರುದಿನದ ಎಲ್ಲಾ ತಯಾರಿ ಮಾಡುತ್ತಿದ್ದ. ಬೆಳಿಗ್ಗೆ ಹಾಕಿಕೊಳ್ಳುವ ಬಟ್ಟೆ, ಕರವಸ್ತ್ರ, ಪಾಕೀಟು, ಪೆನ್ನು, ಸಾಕ್ಸು ಎಲ್ಲವನ್ನೂ ವ್ಯವಸ್ಥಿತವಾಗಿ ಇರಿಸಿ ಮಲಗುತ್ತಿದ್ದ. ಅವನನ್ನು ಮೆಚ್ಚುಗೆ ತುಂಬಿದ ಕೌತುಕದಿಂದ ಬಾಬಾ ನೋಡುತ್ತಿದ್ದ. ಅದನ್ನು ಗಮನಿಸಿದ ಹಸ್ತಾಕ್ಷರ ಬಾಬಾನಿಗೆ 'ಅವನು ಟೂಥ್ ಬ್ರಶ್ಶಿಗೆ ಪೇಸ್ಟನ್ನೂ ಇವತ್ತೇ ಹಚ್ಚಿಡ್ತಾನೆ' ಎಂದು ಛೇಡಿಸುತ್ತಿದ್ದ. 'ನಾಳೆದನ್ನು ನಾಳೆ ನೋಡಬೇಕು. ಇವತ್ತೇ ನಾಳೆಯನ್ನು ಶುರು ಮಾಡ್ಕೊಳ್ಳುದು ನನಗಂತೂ ಆಗುವುದಿಲ್ಲ' ಎನ್ನುತ್ತಿದ್ದ. ಚಂದಾ ಇದ್ದಿದ್ದರೆ ಇವನಿಗೂ ಶಿಸ್ತು ಹಚ್ಚಿರುತ್ತಿದ್ದಳು ಎಂದು ಬಾಬಾಗೆ ಅನಿಸಿ ಮಗನ ಬಗ್ಗೆ ಮರುಕ ತುಂಬಿದ ಮುದ್ದು ಉಕ್ಕಿತು. ಇಬ್ಬರನ್ನೂ ಖುಶಿಪಡಿಸೋಣ ಎಂದು 'ಸರಿ ನನಗೆ ಒಂದು ಜಾಗ ನೋಡುವ ಆಸೆ ಇದೆ. ತೋರಿಸಿ ಬಿಡಿ. ಅದರ ಬಗ್ಗೆ ತುಂಬ ಕೇಳಿದ್ದೇನೆ. ಚಂದಾಗೂ ಅದರ ಬಗ್ಗೆ ಕುತೂಹಲ ಇತ್ತು. ಅದರ ಬಗ್ಗೆ ಪೇಪರಲ್ಲಿ ಬಂದಾಗ ಅದನ್ನು ಕತ್ತರಿಸಿ ಇಟ್ಟುಕೊಂಡಿದ್ದಳು. ಏನಿರಬಹುದು ಹೇಳಿ ನೋಡುವಾ?' ಎಂದು ಹುಬ್ಬು ಹಾರಿಸುತ್ತ ಸಣ್ಣ ತಾಕೀತು ಮಾಡಿದ.



'ಮಾಥೆರಾನ್?', 'ಊಹೂಂ', 'ಎಲಿಫಂಟಾ ಕೇವ್ಸ್?. 'ಊಹೂಂ', 'ತಾರಾಪುರವಾಲಾ ಮತ್ಸ್ಯಾಲಯ?'. 'ಊಹೂಂ', 'ಹಾಜಿ ಅಲಿ?', 'ಊಹೂಂ'...ಇಬ್ಬರೂ ಸೋಲೊಪ್ಪಿದವರಂತೆ ಸುಮ್ಮನಾಗಿ 'ನೀವೇ ಹೇಳಿ' ಎನ್ನುವಂತೆ ಬಾಬಾನ ಮುಖವನ್ನೇ ನೋಡಿದರು. ಬಾಬಾ ಗೆಲುವಿನ ತುಂಟ ಉಮೇದಿಯಿಂದ 'ಹೇಳಲಿ? ಧೋಬೀಘಾಟ್! ಅದೊಂದು ಸಲ ನೋಡಬೇಕು ಬಾಳಾ. ಶಹರದ ಅಸಂಖ್ಯ ಬಟ್ಟೆಗಳನ್ನು ಒಗೆಯುವ ಕಾಶಿಯಂತೆ ಅದು' ಎಂದ. ಸಾನೆ ಉತ್ಸಾಹದಿಂದ 'ಜರೂರ್' ಎಂದ.

ಮರುದಿನ ಮುಂಜಾವಿನ ಲೋಕಲ್ ರೈಲಿನ ಪೀಕ್ ಸಮಯದ ನಂತರ ಸಾನೆ, ಹಸ್ತಾಕ್ಷರ ವಿಲೆಪಾರ್ಲೆ ರೇಲ್ವೆ ಸ್ಟೇಷನ್ನಿಗೆ ಬಾಬಾನೊಂದಿಗೆ ಹೋದರು. ನಿಮಿಷಕ್ಕೊಂದು ಲೋಕಲ್ ರೈಲುಗಳು ಹಾಯುತ್ತಿದ್ದವು. ಬೋರಿವಿಲಿ, ವಸಯಿ, ವಿರಾರ್‌ಗಳಿಂದ ಬಂದ ರೈಲುಗಳು ಕೆಲಸಕ್ಕೆ ಹೊರಟ ಜನಗಳಿಂದ ಕಿಕ್ಕಿರಿದುಕೊಂಡಿದ್ದವು. ಎಲ್ಲವೂ ಚರ್ಚ್‌ಗೇಟಿಗೆ ಹೋಗುವವು. ಅಂಧೇರಿ ಕೇವಲ ಒಂದು ನಿಲ್ದಾಣ ಹಿಂದಿನದಾದ್ದರಿಂದ ಅಲ್ಲಿಂದಲೇ ಹೊರಟು ಬರುವ ರೈಲಿನಲ್ಲಿ ಸಂದಣಿ ಕಡಿಮೆ ಇದ್ದೀತು ಎಂದು ಸಾನೆ 'ನಾವು ಅಂಧೇರಿಯಿಂದ ಬರುವ ಲೋಕಲ್‌ಗೇ ಕಾಯುವಾ' ಎಂದ. 'ಎಲ್ಲಾ ಚರ್ಚ್‌ಗೇಟ್‌ಗೆ ಹೋಗುತ್ತವೆ. ಅಲ್ಲಿ ಇಳಿದು ಜನ ಅಲ್ಲಿಂದ ತಮ್ಮ ತಮ್ಮ ಕೆಲಸದ ಆಫೀಸುಗಳಿಗೆ ಹೋಗುತ್ತಾರೆ. ಸಂಜೆ ಮತ್ತೆ ಅಲ್ಲಿಂದ ರೈಲು ಹಿಡಿದು ಮರಳಿ ತಮ್ಮ ತಮ್ಮ ಉಪನಗರಗಳಿಗೆ ಹೋಗುತ್ತಾರೆ. ಕೆಲವರಿಗೆ ಎರಡು ಗಂಟೆಯ ಪಯಣ ಇರ್ತದೆ. ಹೀಗಾಗಿ ದೂರದ ರೈಲುಗಳ ನಿಯಮಿತ ಪ್ರಯಾಣಿಕರ ಭಜನಾ ಮಂಡಲಿಗಳೂ ಇವೆ' ಎಂದು ಹಸ್ತಾಕ್ಷರ ವೀಕ್ಷಕ ವಿವರಣೆ ಕೊಡುತ್ತಿದ್ದ. ಈ ಸ್ಟೇಷನ್ನಿನಲ್ಲಿ ನಿಲ್ಲದೆ ಜೋರಾಗಿ ಬಿರುಗಾಳಿಯಂತೆ ಹಾದುಹೋದ ವಿರಾರ್ ಲೋಕಲ್‌ನಿಂದ ಕ್ಷಿಪ್ರವಾಗಿ ಕೇಳಿಸಿದಂತಾಗಿ ಮರೆಯಾದ ಭಜನೆಯ ತಾಳ, ನಾದಗಳು ವಿಲಕ್ಷಣವಾಗಿದ್ದವು. ಅದು ಹಾದುಹೋದ ನಂತರ, ನೀರವವನ್ನು ಇನ್ನೂ ವಿಲಕ್ಷಣಗೊಳಿಸುವಂತೆ ಜೀವಕ್ಕೆ ಅತಿ ಆಪ್ತವಾದಂಥ ಪರಿಮಳವೊಂದು ಗಾಳಿಯಲ್ಲಿ ತೇಲಿ ಬಂತು. ಗ್ಲುಕೋಸ್ ಬಿಸ್ಕಿಟಿನ ಪರಿಮಳ! ಎಲ್ಲರನ್ನೂ ನಿಂತಲ್ಲೇ ಕ್ಷಣಾರ್ಧದಲ್ಲಿ ಬಾಲ್ಯಕ್ಕೆ ರವಾನಿಸುವ ಪರಿಮಳ. 'ಆಹಾ..'

PAGE DONATED BY : **SHRI ANANT GANESH BHAT, BANDRA & FAMILY**

ಎಂದ ಬಾಬಾನಿಗೆ ಸಾನೆ 'ಕಾಕಾ, ಅಲ್ನೋಡಿ ಎದುರಿನ ಕಂಪೌಂಡಿನಾಚೆ.. ಅದು ಗ್ಲುಕೋಸ್ ಬಿಸ್ಕೀಟಿನ ಕಾರ್ಖಾನೆ' ಎಂದು ಕೈ ಮಾಡಿ ತೋರಿಸಿದ. 'ಆಹಾ' ಎಂದು ಮತ್ತೊಮ್ಮೆ ಉಸಿರೆಳೆದುಕೊಂಡು ಉದ್ಗರಿಸಿದ ಬಾಬಾ ಎರಡೂ ಕೈಗಳನ್ನು ಆ ಕಡೆಗೆ ಎತ್ತಿ ಪುಣ್ಯಸ್ಥಳವನ್ನು ಕಂಡವನಂತೆ ಮೃದುವಾಗಿ ಜೋಡಿಸಿ ನಮಿಸಿದ. ಹತ್ತು ಪೈಸೆಗೆ, ರೂಪಾಯಿಗೆ ಇಡೀ ಪಾಕೀಟೇ ಸಿಗುತ್ತಿದ್ದ ಆ ಬಿಸ್ಕೀಟು ಭೂಮಿಯ ಎಷ್ಟೊಂದು ಹಸಿದ ಮಕ್ಕಳನ್ನು ಸಂತೈಸಿದೆ ಎಂದವನಿಗೆ ಅನಿಸಿತು. ಅಷ್ಟರಲ್ಲಿ 'ಬಂತು ಬಂತು' ಎಂದು ಹಸ್ತಾಕ್ಷರ, ಸಾನೆ ಇಬ್ಬರೂ ನಿಲ್ದಾಣವನ್ನು ಪ್ರವೇಶಿಸುತ್ತಿರುವ ರೈಲಿಗೆ ಬಾಬಾನನ್ನು ಎಚ್ಚರಿಸಿ ಅಣಿಗೊಳಿಸಿದರು. 'ಇಳಿಯುವವರನ್ನು ಮೊದಲು ಇಳಿಯಲು ಬಿಡಿ. ನಂತರ ಎಡಗೈಲಿ ರಾಡ್ ಹಿಡಿದು ಬಲಗಾಲು ಒಳಗಿಟ್ಟು ಹತ್ತಿಬಿಡಿ. ನಾವು ಹಿಂದೆ ಇರ್ತೇವೆ' ಎಂದು ಕೊನೆಗಳಿಗೆಯ ಸೂಚನೆಗಳನ್ನು ಕೊಟ್ಟರು. ಹಸ್ತಾಕ್ಷರ-'ಸಾನೇ ನೀನು ಮೊದಲು ನುಗ್ಗು. ನಿನ್ನ ಹಿಂದೆ ಬಾಬಾ ಬರಲಿ. ಅವರ ಹಿಂದೆ ನಾ..' ಹೀಗೆಲ್ಲ ಹೇಳುತ್ತಿರುವಾಗಲೇ ರೈಲು ನಿಂತಿತು. ಈ ಬಾಗಿಲಿನೆಡೆ ಹೋಗುವುದೋ ಆ ಬಾಗಿಲಿನೆಡೆಗೋ ಎಂಬ ದ್ವಂದ್ವದಲ್ಲಿ ನಾಲ್ಕು ಸೆಕೆಂಡು ಹಾಳಾಯಿತು. ಒಂದು ಕಡೆ ಓಡಿದರು. ಅದರಿಂದ ಪುತಪುತ ಜನ ಇಳಿಯುತ್ತಲೇ ಇದ್ದರು. ಅರೆ.. ಇಷ್ಟರೊಳಗೆ ಒಳ ಸೇರಬೇಕಿತ್ತು. ಇನ್ನೇನು ಅರ್ಧಮರ್ಧ ಹತ್ತುವಾಗಲೇ ಹೊರಟುಬಿಟ್ಟರೆ ಎಂದು ಆತಂಕವಾಗಿ, ಇದನ್ನು ಬಿಟ್ಟೇ ಬಿಡೋಣ ಎಂದು ಒಂದೇ ವೇಳೆಗೆ ಸಾನೆ ಮತ್ತು ಹಸ್ತಾಕ್ಷರ ಯೋಚಿಸಿ ಈ ಪ್ರಯತ್ನವನ್ನು ಕೈಚೆಲ್ಲುವ ಕ್ಷಣದಲ್ಲೇ ಎಲ್ಲಿಲ್ಲದ ಆವೇಶದಿಂದ ಬಾಬಾ ಎಡಕ್ಕೆ ಸ್ಟೀಲ್ ಕಂಬಿ ಹಿಡಿದು ಚಲಿಸಲು ಅದಾಗಲೇ ಆರಂಭಿಸಿದ್ದ ಬೋಗಿಯ ಬಾಗಿಲಲ್ಲಿ ಬಲಗಾಲಿಟ್ಟು, ಅದರ ಚಲನೆಗೆ ಓಲಾಡುತ್ತ ಒಳಸೇರಿಕೊಂಡು, ಅಲ್ಲಿ ಒಳಗಿದ್ದ ಜನರು ತಮ್ಮ ಎಂದಿನ ವಾಡಿಕೆಯಂತೆ ಅವರನ್ನು ಸುರಕ್ಷಿತವಾಗಿ ಎಳಕೊಂಡು ಸಂದಣಿಯಲ್ಲಿ ಬಾಬಾ ಮರೆಯಾಗಿ, ರೈಲು ಹೋಗಿಯೇ ಬಿಟ್ಟಿತು.

ಒಂದು ಕ್ಷಣ ಏನೂ ತೋಚಲಿಲ್ಲ. ಬಾಬಾಗೆ ಮಹಾಲಕ್ಷ್ಮಿ ಸ್ಟೇಷನ್ನಿನಲ್ಲಿ ಇಳಿಯಬೇಕು ಅಂತ ಗೊತ್ತಿಲ್ಲ. ಅವರ ಬಳಿ ಟಿಕೆಟ್ಟಿಲ್ಲ. ಅಲ್ಲಿ ಇಳಿಯದಿದ್ದರೆ ಅವರು ಇನ್ನೆಲ್ಲಿ ಇಳಿದಾರು ಕೊನೆಯ ನಿಲ್ದಾಣ ಚರ್ಚ್‌ಗೇಟ್. ಅಲ್ಲಿ ಹತ್ತಲೆಂದೇ ಕಾದಿರುವ ಸಮೂಹ ದೈತ್ಯನಂತೆ ಇಳಿಯಲೂ ಕೊಡದೆ ಒಳನುಗ್ಗುತ್ತದೆ. ಅವರಿಗೆ ದಿಕ್ಕೇ ತೋಚದೆ ಡಬ್ಬಿಯಲ್ಲೇ ಉಳಿದು ರೈಲು ಮತ್ತೆ ಮರಳಿ ಅಂಧೇರಿಗೆ ಹೊರಟುಬಿಟ್ಟರೆ, ಅವರನ್ನು ಪತ್ತೆ ಹಚ್ಚುವುದು ಹೇಗೆ. ಇಬ್ಬರೂ ಕಂಗಾಲಾಗಿ ಮೂಕ ಸಂವಾದದಲ್ಲಿ ತೊಡಗಿದ್ದಾಗಲೇ ಬೆನ್ನಿಗೇ ಇನ್ನೊಂದು ಲೋಕಲ್ ಬಂತು. ಇಬ್ಬರೂ ಮೊದಲು ಹತ್ತಿಕೊಂಡರು. ಮುಂದೆ ಹೋದ ಲೋಕಲ್‌ನಲ್ಲಿ ಮಸೆಯುತ್ತಿರುವ ಅಪರಿಚಿತ ಜಂಗುಳಿಯ ನಡುವೆ ಏನೂ ತೋಚದೆ ನಿಂತಿರಬಹುದಾದ ಬಾಬಾನನ್ನು ನೆನೆದಷ್ಟೂ ಹಸ್ತಾಕ್ಷರನಿಗೆ ಅಧೀರತೆ ಹೆಚ್ಚಾಯಿತು. 'ಕಾಳಜಿ ಬೇಡ, ನಾವು ಇಲ್ಲೇ ಬಾಗಿಲಲ್ಲೇ ಇರೋಣ. ಒಂದು ವೇಳೆ ಮುಂದಿನ ಸಾಂತಾಕ್ರೂಜ್‌ನಲ್ಲೇ ಅವರು ಇಳಿದು ಬಿಟ್ಟಿದ್ದರೆ ಪ್ಲಾಟ್‌ಫಾರ್ಮಿನ ಮೇಲೆ ಇರ್ತಾರೆ, ಕಾಣುತ್ತದೆ. ಇಲ್ಲವಾದರೆ ಮಹಾಲಕ್ಷ್ಮಿ ಸ್ಟೇಷನ್ನಿನಲ್ಲಿ ಒಬ್ಬರು ಇಳಿದರಾಯಿತು. ಇನ್ನೊಬ್ಬರು ಚರ್ಚ್‌ಗೇಟಿಗೆ ಹೋದರಾಯಿತು'-ಎಂದ ಸಾನೆ. ಇವರಿಬ್ಬರ ಬೇಚೈನಿಯನ್ನು ಸರಿಯಾಗೇ ಗ್ರಹಿಸಿ ಪಕ್ಕದಲ್ಲಿದ್ದ ಮಹಿಳೆ ಒಬ್ಬರು 'ಎಲ್ಲಿ ಇಳಿಯಬೇಕು ಅಂತ ಅವರಿಗೆ ಗೊತ್ತಿದೆಯಲ್ಲವೆ?' ಅಂದರು. 'ಇಲ್ಲ' ಎಂದಾಗ 'ಕಾಳಜಿ ಮಾಡಬೇಡಿ ಲಾಸ್ಟ್ ಸ್ಟೇಷನ್ನಿನಲ್ಲಿ ಇಳಿದಿರ್ತಾರೆ. ಅಕ್ಕಪಕ್ಕದವರು ಅವರಿಗೆ ಹಾಗೇ-ಸಲಹೆ ಕೊಟ್ಟಿರ್ತಾರೆ' ಎಂದು ಧೈರ್ಯ ಕೊಟ್ಟರು. ಆಗ ಒಮ್ಮೆಲೇ ಮೋಡ ಕರಗಿದಂತೆ ಧೈರ್ಯ ಬಂದರೂ - ಮತ್ತೆ ಒಳಗಿಂದ ಸ್ತಬ್ಧತೆಯೊಂದು ಮನಸ್ಸನ್ನು ಬಧಿರಗೊಳಿಸುತ್ತಿತ್ತು. ಸಾಂತಾಕ್ರೂಜ್ ಸ್ಟೇಷನ್ನು ಸಮೀಪಿಸಿದ್ದೆ ಇಬ್ಬರೂ ಕಣ್ಣು ಕೀಲಿಸಿ ಬಾಗಿಲಿಗೆ ಜೋತು ಬಿದ್ದರು. ರೈಲು ಪೂರ್ತಿ ನಿಲ್ಲುವ ತುಸು ಮೊದಲೇ ಸಾನೆ ಇಳಿದು ಓಡಾಡಿ ಬಂದ. ಬಾಬಾ ಇರಲಿಲ್ಲ. ಸರಿ ಇನ್ನು ಮಹಾಲಕ್ಷ್ಮಿ ಸ್ಟೇಷನ್ ತನಕ ಚಡಪಡಿಕೆ. ಹಸ್ತಾಕ್ಷರನ ಕಣ್ಣೆದುರು ಸರಕ್ಕನೆ ಎವೆ ಇಕ್ಕುವುದರೊಳಗೆ ತನ್ನ ಅಳವಿನ ಜಗತ್ತಿನಾಚೆಗೆ ಹೋಗಿಬಿಟ್ಟ ಬಾಬಾನ ಆ ಅಂತರ್ಧಾನದ ಕ್ಷಣ ಮತ್ತೆ ಮತ್ತೆ ಕವಿಯುತ್ತಿತ್ತು. ಅದರಾಚೆ ಏನನ್ನು ಯೋಚಿಸಲೂ ಹಿಂಜರಿದು ಮನಸ್ಸು ಬಧಿರವಾಗೇ ಇತ್ತು. ದಾದರಿನಲ್ಲಿ ಮಹಾ ಸಂದಣಿಯೊಂದು ನುಗ್ಗಿದಾಗ ಮತ್ತೆ ಬಾಬಾನ ಪಾಡನ್ನು ಊಹಿಸಿ ಜೀವ ಕಲಮಲಗೊಂಡಿತು. ಸಾನೆ ಒಂದು ದಿಕ್ಕಿನ ಪ್ಲಾಟ್‌ಫಾರ್ಮನ್ನು, ಹಸ್ತಾಕ್ಷರ ಇನ್ನೊಂದು ದಿಕ್ಕಿನ ಪ್ಲಾಟ್‌ಫಾರ್ಮನ್ನೂ ಪ್ರತಿ ಸ್ಟೇಷನ್ನು ದಾಟುವಾಗಲೂ ನೋಡುತ್ತಲೇ ಇದ್ದರು. ಇಲ್ಲೇ ಮುಂದಿನ ರೈಲಿನಲ್ಲೇ ಇದ್ದರೂ ನಿಲುಕಿನಾಚೆಗೆ ಸಂದು ಹೋದಂಥ ವಿಚಿತ್ರ ಸೂಕ್ಷ್ಮ ಸಂಕಟ. ಬಾಬಾಗೆ ಭಯ ಉಂಟಾದರೆ ಎಂಬ ಆತಂಕವೂ ಹಸ್ತಾಕ್ಷರನನ್ನು ಅಸ್ಪಷ್ಟವಾಗಿಯೇ ಕಾಡುತ್ತಿತ್ತು. ಬಾಬಾ ಶಾಶ್ವತವಾಗಿ ಕಳೆದುಹೋದರೆ ಎಂಬ ಮೂಕ ಭಯ. ದುಸ್ವಪ್ನದ ನಿದ್ದೆಯೊಂದು ದೀರ್ಘವಾಗುತ್ತಲೇ ಹೋದಂತೆ, ಜೀವ ಹೋದರೂ ಮಹಾಲಕ್ಷ್ಮಿ ಬರುತ್ತಲೇ ಇಲ್ಲ. ಇವನ ಅಧೀರತೆಯನ್ನು ಇನ್ನೂ ಬಲವಾಗಿ ಮನಗಂಡ ಆ ಮಹಿಳೆ ತನ್ನ ನಿಲ್ದಾಣದಲ್ಲಿ ಇಳಿಯುವಾಗಿನ ಧಾವಂತದಲ್ಲೂ ಹಸ್ತಾಕ್ಷರನತ್ತ 'ಜನರ ನಡುವೆ ಇದ್ದಾರೆ. ಕಾಳಜಿ ಬೇಡಾ' ಎಂದು ಹೇಳುತ್ತಿರುವಾಗಲೇ ಇತರರೊಂದಿಗೆ ಹೊರಗೆ ತಳ್ಳಲ್ಪಟ್ಟಳು. ಪರಸ್ಪರ ಗುರ್ತಿರದ ಆದರೆ ಒಟ್ಟಿಗೇ ಇರುವ ಸಂದಣಿಯಲ್ಲಿ ಮಾತ್ರ ಸಿಗುವ ಅಭಯದಂತೆ ಆಕೆಯ ದನಿ ಕೇಳಿಸಿತು...ಜೋರಾಗಿ ಹಾಯುವ ವಾಹನದ ಶ್ರುತಿ ಡೊಂಕಾದ ಹಾರ್ನಿನಂತೆ. *(ಮುಂದುವರಿಯುವುದು)*

(ಸೌಜನ್ಯ : ಅನಾರ್ಕಲಿಯ ಸೇಫ್ಟಿಪಿನ್)

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

ADVT.

# ಆರ್ಥಿಕ ಭದ್ರತೆಗೆ ಬೇಕಾದ ಜೀವನಶೈಲಿ : ಒಂದು ಚಿಂತನೆ

✍ ಡಾ. ಜಿ. ವಿ. ಜೋಶಿ

ಫ್ರೆಂಚ್ ಗಾದೆಯೊಂದು 'ಉಳಿತಾಯವೇ ವೆಚ್ಚಕ್ಕೆ ಮೂಲಧನ' ಎಂದು ಸಾರಿದೆ. ಇಂದಿನ ಉಳಿತಾಯ ನಾಳೆಯ ವೆಚ್ಚಕ್ಕೆ ಆಧಾರವಾಗಲಿದೆಯೆಂಬ ಸಂದೇಶವನ್ನು ಈ ಗಾದೆ ನೀಡುತ್ತದೆ. ಕೇವಲ ಉಳಿತಾಯಕ್ಕಾಗಿ ಉಳಿತಾಯವಾಗಬೇಕೆಂದು ಹೇಳುವುದು ಸರಿಯಲ್ಲ. ಬದಲಾಗಿ ಅಭಿವೃದ್ಧಿಶೀಲ ರಾಷ್ಟ್ರವಾದ ಭಾರತದಲ್ಲಿ ಈ ತನಕ ಆದ ಅನುಭವದ ಆಧಾರದಲ್ಲಿ ನಾಳೆಯ ಹೂಡಿಕೆಗಾಗಿ ಇಂದು ಉಳಿತಾಯ ಮಾಡಬೇಕಾದ ಅಗತ್ಯವನ್ನು ಒಪ್ಪಬೇಕಾಗುತ್ತದೆ, ಪ್ರತಿಪಾದಿಸಬೇಕಾಗುತ್ತದೆ.

ಆದಾಯ, ವೆಚ್ಚ ಮತ್ತು ಉಳಿತಾಯಗಳ ನಡುವೆ ಇರುವ ಪರಸ್ಪರ ಸಂಬಂಧವನ್ನು ಸೈದ್ಧಾಂತಿಕವಾಗಿ ವಿಶ್ಲೇಷಿಸಿ ವಿಶ್ವಾದ್ಯಂತ ಹೆಸರು ಮಾಡಿದ ಆರ್ಥಿಕ ತಜ್ಞ ಜೆ. ಎಂ. ಕೇನ್ಸರ ಆರಾಧಕ ಎ. ಎಚ್. ಹಾನ್ಸೆನ್ ತಮ್ಮ ಪುಸ್ತಕದಲ್ಲಿ (1953) ಯಾವುದೇ ದಿವ್ಯ ತತ್ವವಾಗಿರಲಿ ಅದನ್ನು ವಿವಾದದ ಸಮುದ್ರದ ಮೇಲೆ ಎಸೆದಾಗ ತನ್ನ ಅಂತಃಸತ್ವವನ್ನು ಮತ್ತು ಶಕ್ತಿಯನ್ನು ಕಳೆದುಕೊಳ್ಳುತ್ತದೆ ಎಂದು ಹೇಳಿದ್ದು ಈಗಲೂ ಅರ್ಥಪೂರ್ಣವಾಗಿ ಉಳಿದುಕೊಂಡಿದೆ. ಈ ಕಾರಣಕ್ಕಾಗಿಯೇ ತ್ರಿಕಾಲಾಬಾಧಿತ ಅಭಿವೃದ್ಧಿ ಸಿದ್ಧಾಂತ ಇನ್ನೂ ಉದಯಿಸಿ ಬಂದಿಲ್ಲ. ಕೆಲವು ಪ್ರಮುಖ ಅಭಿವೃದ್ಧಿ ಸಿದ್ಧಾಂತಗಳು ಉಳಿತಾಯ ಮತ್ತು ಹೂಡಿಕೆ ಸಮನಾಗಿರಬೇಕೆಂದು ವಾದಿಸುವಾಗ ಕೊಳ್ಳುಬಾಕತನಕ್ಕೆ ಆಸ್ಪದ ನೀಡುವುದೇ ಇಲ್ಲ.

ವೈಯಕ್ತಿಕ ಹಿತ ಹಾಗೂ ರಾಷ್ಟ್ರದ ಆರ್ಥಿಕ ಭದ್ರತೆಯ ನಡುವಿನ ಅವಿನಾಭಾವ ಸಂಬಂಧವನ್ನು ಸರಿಯಾಗಿ ಗುರುತಿಸಿದರೆ ಉಳಿತಾಯದ ಪ್ರವೃತ್ತಿಗೆ ಅಡ್ಡಿ ಬಾರದಂತೆ ಕಾಳಜಿ ವಹಿಸಬಹುದು. ಈ ಸಂಬಂಧವನ್ನು ಕ್ಷುದ್ರ ರಾಜಕೀಯ ಕಾರಣಕ್ಕೆ ನಿರ್ಲಕ್ಷಿಸಿದರೆ ಸಾಲ ಮನ್ನಾದಂಥ ಜವಾಬ್ದಾರಿರಹಿತ ನಿರ್ಧಾರಗಳಿಗೆ ಸರಕಾರಗಳು ಶರಣಾದ ಸನ್ನಿವೇಶಗಳು ಇವೆ. ಈಗ ಸ್ಪಷ್ಟವಾಗಿ ದಾಖಲೆಯಾದ ಸತ್ಯ ಇದು. ಆರ್ಥಿಕ ಭದ್ರತೆಗೆ ಬೇಕಾದ ಜೀವನ ಶೈಲಿಯನ್ನು ಬೆಳೆಸುವ ಬದಲು ಹಿಂದಿನ ಯುಪಿಎ ಸರಕಾರ ಹಾಗೂ ಕೆಲವು ರಾಜ್ಯ ಸರಕಾರಗಳು ವೋಟ್ ಬ್ಯಾಂಕ್ ನಿರ್ಮಾಣದ ಉದ್ದೇಶದಿಂದ ಸಾಲಮನ್ನಾ ನೀತಿಯನ್ನು ಸಾರುವ ದುಸ್ಸಾಹಸ ಮಾಡಿವೆ. 2022 ರ ಜು. 2 ರಂದು ಕೆಲವು ದಿನ ಪತ್ರಿಕೆಗಳಲ್ಲಿ ಕಾಣಿಸಿಕೊಂಡ ಬೃಹದಾಕಾರದ ಜಾಹೀರಾತುಗಳು ತೋರಿಸಿದಂತೆ ತೆಲಂಗಾಣ ಸರಕಾರ ಹಿಂದಿನ ಎಂಟು ವರುಷಗಳ ಅವಧಿಯಲ್ಲಿ ರೈತರ ಸಾಲ ಮನ್ನಾ ಮಾಡಿದ್ದು ಒಂದು ಮಹಾ ಸಾಧನೆಯಂತೆ! ಈ ರೀತಿಯ ಪ್ರಮಾದ ಮತ್ತೆ ಆಗದಂತೆ ಎಚ್ಚರಿಕೆ ವಹಿಸುವ ಅವಶ್ಯಕತೆ ನಿಚ್ಚಳವಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ಸಾಲ ಮನ್ನಾ ಪ್ರಯೋಗಗಳಿಂದಾದ ಅಪಾಯವನ್ನು ಗುರುತಿಸಬೇಕು. ಇದನ್ನು ಗುರುತಿಸುವ ಪ್ರಯತ್ನ ಈ ಲೇಖನದಲ್ಲಿದೆ.

**ದುಂದು ವೆಚ್ಚಕ್ಕೆ ಬೇಕು ಉಳಿತಾಯದ ಕಡಿವಾಣ :**

ಅರ್ಥಶಾಸ್ತ್ರದ ಜನಕ ಎಂದೇ ಹೆಸರು ಮಾಡಿದ ಆ್ಯಡಂ ಸ್ಮಿತ್ 1776ರಲ್ಲಿ ಬೆಳಕು ಕಂಡ 'ರಾಷ್ಟ್ರಗಳ ಸಂಪತ್ತಿನ ಸ್ವರೂಪ ಮತ್ತು ಕಾರಣಗಳ ಕುರಿತು ಒಂದು ವಿಚಾರಣೆ' ಎನ್ನುವ ಅವರ ಪುಸ್ತಕದಲ್ಲಿ ಆರ್ಥಿಕಾಭಿವೃದ್ಧಿಯಲ್ಲಿ ಬಂಡವಾಳ ಸಂಚಯನದ ಮಹತ್ವವನ್ನು ವಿಶದಪಡಿಸಿದ್ದರು. ಜನ ಸಾಮಾನ್ಯರ ಉಳಿತಾಯದ ಪ್ರವೃತ್ತಿಯಿಂದಲೇ ಆರ್ಥಿಕಾಭಿವೃದ್ಧಿಗೆ ಬೇಕಾದ ಬಂಡವಾಳದ ಪ್ರಮಾಣ ಜಾಸ್ತಿಯಾಗುತ್ತದೆ, ದುಂದುವೆಚ್ಚ ಮತ್ತು ದುರ್ನಡತೆಯಿಂದ ಅದು ಕ್ಷೀಣಿಸುತ್ತದೆ ಎಂಬ ಅವರ ವಾದವನ್ನು ಈಗಲೂ ಆಗಾಗ ಪುನರುಚ್ಚರಿಸಲಾಗುತ್ತಿದೆ. ಸ್ಮಿತ್ ವೈಯಕ್ತಿಕ ಭದ್ರತೆ ಹಾಗೂ ರಾಷ್ಟ್ರದ ಆರ್ಥಿಕ ಪ್ರಗತಿಯ ನಡುವಿನ ಸಂಬಂಧವನ್ನು ತಿಳಿಸಿದ್ದಲ್ಲದೆ, ಕೊಳ್ಳುಬಾಕತನದ ಅಪಾಯಗಳನ್ನು ಸೂಚಿಸುವ ಎಚ್ಚರಿಕೆಯ ಗಂಟೆ ಬಾರಿಸಿದ್ದರು.



ಇಪ್ಪತ್ತನೆಯ ಶತಮಾನ ಅಭಿವೃದ್ಧಿ ಸಿದ್ಧಾಂತಗಳ, ಯೋಜನೆಗಳ ಶತಮಾನವಾಗಿತ್ತೆಂದು ಹೇಳಬಹುದು. ಮುಂದುವರಿದ ರಾಷ್ಟ್ರಗಳು ಅಭಿವೃದ್ಧಿ ದರವನ್ನು ಸರಾಗವಾಗಿ ಮುಂದುವರಿಸಿ ಕೊಂಡು ಹೋಗುವ ಸವಾಲನ್ನು ಎದುರಿಸುತ್ತಿದ್ದವು. ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರಗಳು ಅಭಿವೃದ್ಧಿ ದರವನ್ನು ಹೆಚ್ಚಿಸಿ ಹಸಿವು, ಬಡತನ ಮತ್ತು ನಿರುದ್ಯೋಗ ಸಮಸ್ಯೆಗಳಿಗೆ ಪರಿಹಾರ ಕಾಣುವ ಸವಾಲನ್ನು ಸ್ವೀಕರಿಸಬೇಕಾಯಿತು. ಭಾರತಕ್ಕೆ ಆಗ ಅಭಿವೃದ್ಧಿ ಮಾದರಿಯನ್ನು ಹುಡುಕುವುದು ಸಮಸ್ಯೆಯಾಗಿತ್ತಾದರೂ ಸಾಮಾನ್ಯ ಜನರಲ್ಲಿದ್ದ ಉಳಿತಾಯದ ಗುಣಕ್ಕೆ ಭಂಗ ಬರಬಾರದೆಂಬ ಸತ್ಯವನ್ನು ಕಡೆಗಣಿಸುವಂತಿರಲಿಲ್ಲ. ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ (1956-61) ಭಾರೀ ಉದ್ದಿಮೆಗಳಿಗೆ ಒತ್ತು ನೀಡುವ ನೀತಿಯನ್ನು ಆಧಾರವಾಗಿಟ್ಟುಕೊಂಡ ನೆಹರು-ಮಹಲನೋಬಿಸ್ ಅಭಿವೃದ್ಧಿ ಮಾದರಿ ಕೂಡ ಉಳಿತಾಯದ ಮಹತ್ವವನ್ನು ಗಮನಿಸಿತ್ತು.

ಆರ್ಥಿಕ ಭದ್ರತೆಗೆ ಬೇಕಾದ ಜೀವನ ಶೈಲಿಯ ಬಗೆಗೆ ಸಮಾಜದ ಹಿತದೃಷ್ಟಿಯಿಂದ ಚಿಂತನೆ ಮಾಡಿದ ಕೆಲವೇ ಸಮಾಜವಾದಿಗಳಲ್ಲಿ ದಿನಕರ ದೇಸಾಯಿ ಒಬ್ಬರಾಗಿದ್ದರು. ಮುಂಬಯಿ ಪ್ರಾಂತ್ಯದಲ್ಲಿ ಅಪಾರ ಪ್ರಮಾಣದಲ್ಲಿ ದೇಣಿಗೆ ಸಂಗ್ರಹಿಸಿ ತಮ್ಮ ಜಿಲ್ಲೆಯಾದ ಉತ್ತರ ಕನ್ನಡದಲ್ಲಿ ಶಾರದೆಗೆ ಶಾಲೆಗಳ ಹಾರ ಹಾಕಿದ ಅವರು ದುಂದು ವೆಚ್ಚವನ್ನು ಎಂದೂ ಸಹಿಸುತ್ತಿರಲಿಲ್ಲ. ಅಲ್ಪ ಆದಾಯವುಳ್ಳವರೂ ಶಿಸ್ತಿನಿಂದ ಜೀವನ ಸಾಗಿಸಿ ಉಳಿತಾಯ ಮಾಡಬೇಕೆಂದು ಬಲವಾಗಿ ನಂಬಿಕೊಂಡಿದ್ದರು. ಅವರು ಬರೆದ ಎರಡು ಚೌಪದಿಗಳು ಜನಸಾಮಾನ್ಯರು ಮಿತವ್ಯಯದ ಪ್ರವೃತ್ತಿಯನ್ನು ಬೆಳೆಸಿಕೊಂಡರೆ ಮಾತ್ರ ಜೀವನದ ತಳಪಾಯ ಕಟ್ಟಿಕೊಳ್ಳಬಲ್ಲರೆಂದು ಹಿತ ಸಂದೇಶ ನೀಡುತ್ತವೆ.

ಒಂದು ಚೌಪದಿಯಲ್ಲಿ ಒಬ್ಬ ವ್ಯಕ್ತಿಯ ಹಂತದಲ್ಲಿ ಉಳಿತಾಯ ಯೋಜನೆ ಹೇಗಿದ್ದರೆ ಸರಿ ಎನ್ನುವುದನ್ನು ದೇಸಾಯಿ ತಿಳಿಸಿದ್ದು ಹೀಗೆ :

"ಇವು ನನ್ನ ಶರ್ಟಿನ ಮೂರು ಗುಂಡಿ  
ಇವುಗಳಷ್ಟೇ ನನ್ನ ಜೀವಿತದ ಹುಂಡಿ.  
ಪ್ರತಿ ತಿಂಗಳಿಗೆ ನಾನು ಮಾಡಿ ಉಳಿತಾಯ,  
ಕಟ್ಟಬೇಕಂತೆ ಜೀವನದ ತಳಪಾಯ"

ಉಳಿತಾಯ ಎಂದರೆ ಜೀವನದ ತಳಪಾಯವೆಂದು ತಿಳಿಸುವ ಉದ್ದೇಶ ದಿಂದಲೇ ದೇಸಾಯಿ ಈ ಚೌಪದಿ ಬರೆದಿದ್ದು. ಅದನ್ನು ಸಮರ್ಥವಾಗಿ ರೂಢಿಸಿಕೊಂಡು ಅವರು ಉತ್ತರ ಕನ್ನಡದಲ್ಲಿ ಕೆನರಾ ವೆಲ್ಫೇರ್ ಟ್ರಸ್ಟನ್ನು (ಸ್ಥಾಪನೆ : 1953) ಕಟ್ಟಿ ಬೆಳೆಸಿದ್ದರಿಂದಲೇ ಒಂದು ಮಾದರಿಯಾಗಬಲ್ಲ ದೊಡ್ಡ ಕೆಲಸ ಅವರಿಂದ ಸಾಧ್ಯವಾಯಿತು. ಮಿತವ್ಯಯ ವಾಸ್ತವದಲ್ಲಿ ಹಿತವ್ಯಯವಾಗಿ ಮಾರ್ಪಾಡು ಹೊಂದಿತು. ಈ ಕಾರಣಕ್ಕಾಗಿಯೇ ಕೆನರಾ ವೆಲ್ಫೇರ್ ಟ್ರಸ್ಟ್ ಇತರರಿಗೆ ಮಾದರಿಯಾದ ರೀತಿಯನ್ನು ಲೇಖಕ ಗೌರೀಶ ಕಾಯ್ಕಿಣಿ ಕೆನರಾ ವೆಲ್ಫೇರ್ ಟ್ರಸ್ಟಿನ ಬೆಳ್ಳಿಹಬ್ಬದ ಸಮಯದಲ್ಲಿ ಬಿಡುಗಡೆಯಾದ ಸ್ಮರಣ ಸಂಚಿಕೆಯಲ್ಲಿ ಪ್ರಕಟವಾದ ತಮ್ಮ ಸುದೀರ್ಘ ಇಂಗ್ಲೀಷ್ ಲೇಖನದಲ್ಲಿ (1979) ತಿಳಿಸಿದ್ದು ಸೊಗಸಾಗಿದೆ.

*(ಮುಂದುವರಿಯುವುದು)*


(ಆಹ್ವಾನಿತ ಲೇಖನ ಉತ್ಥಾನ ಜನವರಿ 2021)

*PAGE DONATED BY : **SMT. KALA BHAGWAT, KHARGAR IN MEMORY OF MOTHER LATE SMT. GOURI BHAT***

# ಸುಬ್ಬಣ್ಣನ ದನಿ ಮಾಧುರ್ಯದ ಗುಂಗಲ್ಲಿ...

✍ ಎಸ್. ಜಿ. ಹೆಗಡೆ

**ಕನ್ನಡ ನಾಡಿನ ಮೂಲೆಮೂಲೆಗೂ ಸುಬ್ಬಣ್ಣರ ಹಾಡಿನ ಕಂಪು ಪಸರಿಸಿದೆ ಎಂಬುದರಲ್ಲಿ ಎರಡು ಮಾತಿಲ್ಲ. 'ಬನ್ನಿ ಭಾವಗಳೆ ಬನ್ನಿ ನಮ್ಮೆಡೆಗೆ' ಎಂದಂತೆ ಎಲ್ಲರ ಭಾವನೆಯನ್ನು ಸರಾಗವಾಗಿ ಸೆಳೆದಿದೆ. ಬದಲಾದ ಸಮಾಜದಲ್ಲಿಯೂ ಸುಬ್ಬಣ್ಣನವರ ಹಾಡಿನ ಮಾಧುರ್ಯ, ಕಂಪು ಅಷ್ಟೇ ಪ್ರಭಾವಶಾಲಿಯಾಗಿದೆ.**



ಗೆಳೆಯ ಬರತೀ ನೀ ಮನದಾಗಿಡೋ ನೆನಪಾ... ಹಾ... ಗೆಳೆಯ ಬರತೀನಿ ಶಿವಮೊಗ್ಗ ಸುಬ್ಬಣ್ಣ ಹಾಡಿರುವ ಹಾಡು ಮನಸ್ಸನ್ನು ಆವರಿಸಿದೆ. ಅದೆಂಥ ತನ್ಮಯತೆ! ಅದೆಷ್ಟು ಭಾವ ಪರವಶತೆ! ಎಂಬತ್ಮೂರು ವಸಂತಗಳನ್ನು ಕಂಡ ಸುಬ್ಬಣ್ಣ ಇಹ ಜಗತ್ತಿನಿಂದ ಇತ್ತೀಚೆಗೆ ದೂರವಾದರು. ಶಿವಮೊಗ್ಗ ಸುಬ್ಬಣ್ಣ ಅವರ ನಿಧನದಿಂದ ಸುಗಮ ಸಂಗೀತ ಕ್ಷೇತ್ರವು ಬಹುದೊಡ್ಡ ಆಸ್ತಿಯನ್ನು ಕಳೆದುಕೊಂಡಿದೆ. ಕನ್ನಡ ಸಂಗೀತ ಸುಧೆಯನ್ನು ಸುಗಮ ಸಂಗೀತದ ಮೂಲಕ ಇನ್ನಷ್ಟು ವಿಸ್ತರಿಸಿದವರು, ಇನ್ನಷ್ಟು ಧೀಮಂತವಾಗಿಸಿದವರು ಸುಬ್ಬಣ್ಣ. ಅರ್ಥಗರ್ಭಿತ ಕಾವ್ಯಗಳನ್ನು ಸುಂದರ ರೂಪಿನಲ್ಲಿ ಸುಗಮವಾಗಿ ಕನ್ನಡಿಗರ ಮನೆ ಮನೆ ತಲುಪಿಸಿದವರು ಶಿವಮೊಗ್ಗ ಸುಬ್ಬಣ್ಣ. ಅವರು ಬಿಟ್ಟು ಹೋದ ಹಾಡುಗಳು, ಹಾಡಿನ ಪರಂಪರೆಯು ಸಮಗ್ರ ಕನ್ನಡಿಗರ ಆಸ್ತಿಯಾಗಿವೆ. ಸಂಗೀತಾಸಕ್ತರ ನೆನಪಿನಲ್ಲಿ ಸದಾ ಉಳಿಯಲಿದೆ.

ಸುಬ್ಬಣ್ಣನವರ ಸಂಗೀತವು ಪಸರಿಸಿರುವುದು ಶುದ್ಧ ಜೇನು ತುಪ್ಪದ ಸವಿ. ಹುಟ್ಟಿದ್ದು ಮಲೆನಾಡಿನ ಶಿವಮೊಗ್ಗೆಯಲ್ಲಿ. ಅವರು ಬೆಳೆದ ದಿನಗಳು ಮಲೆನಾಡಿನ ನಿಸರ್ಗದ ಸಿರಿವಂತಿಕೆ ತುಂಬಿ ತುಳುಕಿದ ಕಾಲದಲ್ಲಿ. ಅದು ನಲ್ವತ್ತರ ದಶಕ. ದಟ್ಟವಾದ ಬೆಟ್ಟ. ಏರು ಮತ್ತು ಇಳಿ ಪ್ರದೇಶದಲ್ಲಿ ಚಂದದಿಂದ ಬೆಳೆದ ತೋಟದ ಭೂವಿನ್ಯಾಸ. ಧೋ ಎಂದು ಒಂದೇ ಸಮನೆ ಮಳೆ ತೊಯ್ದ ನೆಲ. ಅಲ್ಲಲ್ಲಿ ಎದ್ದ ಒರತೆಯು ಝರಿಯಾಗಿ ಹರಿದು ಹೋಗಿ ಧುಮುಕುವ ಜಲಪಾತದ ದೃಶ್ಯ. ನಿರ್ಭೀತಿಯಿಂದ ಮೋಜಿನಲ್ಲಿ ತೊಡಗಿದ್ದ ಕಾಡು ಪ್ರಾಣಿಗಳು. ಕೊಟ್ಟಿಗೆಯ ತುಂಬಾ ಹಸು, ಕುರಿಗಳ ಮಂದೆ. ದಟ್ಟವಾದ ಬೆಟ್ಟದಲ್ಲಿ ಹೆಮ್ಮರಗಳಿಗೆ ಕಟ್ಟಿ ತೂಗಾಡುವ ಹೆಜ್ಜೇನು. ರೆಕ್ಕೆ ಬಿಚ್ಚಿ ಕುಣಿಯುವ ನವಿಲು. ಸುತ್ತಮುತ್ತ ಅರಳಿರುವ ನೂರೆಂಟು ಬಗೆಯ ಹೂಗಳಿಂದ ಜೇನು ಹುಳುಗಳು ಸುಗಂಧ ದ್ರವ್ಯ ಹೀರಿ ತಂದು ಶೇಖರಿಸಿದ ಮಧು. ಅಂತಹ ಜೇನು ತುಪ್ಪದ ವಿಶೇಷ ಸವಿ. ಸುಗಂಧ ಲೇಪ.

ಶಿವಮೊಗ್ಗೆಯಲ್ಲಿ ಹರಿದಿದೆ ತುಂಗಾ ನದಿ. ಭಗವಾನ್ ಶಿವನು ಸಿಹಿಯಾದ ತುಂಗೆಯ ನೀರನ್ನು ಮೊಗ್ಗೆಯಿಂದ ಕುಡಿದಿರುವ ಕಥೆಯಿದೆ. ಅದಕ್ಕೇ ಅಲ್ಲಿನ ಪ್ರದೇಶಕ್ಕೆ ಶಿವಮೊಗ್ಗ ಎಂದು ಹೆಸರು ಬಂದಿರುವುದಾಗಿ ತಿಳಿದಿದೆ. ಸುಬ್ಬಣ್ಣನವರ ಹಾಡುಗಳಲ್ಲಿ ಶಿವಮೊಗ್ಗೆ ಮೂಲದ ಜೇನು ತುಪ್ಪದ ಸವಿ, ಸುಗಂಧ ಕಂಪು ಜೊತೆ ತುಂಗಾ ನೀರಿನ ಶುದ್ಧತೆ ಮತ್ತು ಮಾಧುರ್ಯ ಸಮ್ಮಿಳಿತವಾದ ಸುಗಮ ಧಾರೆ ಹರಿದಿದೆ.



ಶಿವಮೊಗ್ಗ ಸುಬ್ಬಣ್ಣನವರು ಹುಟ್ಟಿದ್ದು ಶಿವಮೊಗ್ಗ ನಗರದಲ್ಲಿ. ನಿಜ ಹೆಸರು ಜಿ. ಸುಬ್ರಹ್ಮಣ್ಯ. ಮನೆತನದಲ್ಲಿ ಸಂಗೀತದ ವರವಿತ್ತು. ತಾತ ಶ್ಯಾಮರಾಯರು ಸಂಗೀತದ ದೊಡ್ಡ ಜ್ಞಾನಿಯಾಗಿದ್ದರು. ಸಂಗೀತ ಪಾಠದ ಶುರು ತಾತನಿಂದಲೇ. ಬಾಲ್ಯದಲ್ಲಿ ಅಂದಿನ ಪ್ರಸಿದ್ಧ ಹಾಡುಗಾರರಾದ ರಫಿ, ಕಿಶೋರ್, ಮನ್ನಾಡೇ ಮುಂತಾದವರ ಪ್ರಭಾವಕ್ಕೊಳಗಾಗಿ ಅಂಥವರ ಹಾಡುಗಳನ್ನು ಹಾಡಿದ್ದರು. ಸಾಕಷ್ಟು ಬಹುಮಾನಗಳಿಗೆ ಪಾತ್ರರಾಗಿದ್ದರು. ಶಾಲೆಗೆ ಹೋಗುವ ದಿನಗಳಲ್ಲಿಯೇ ಹಾಡಿನ ಸುಬ್ಬಣ್ಣ ಎಂದು ಆ ಭಾಗದ ಜನರಿಂದ ಕರೆಸಿಕೊಂಡಿದ್ದರು. ಸುಬ್ಬಣ್ಣನವರ ಹಾಡಿನ ಪ್ರಖರತೆಯನ್ನರಿತ ಅಂದಿನ ಜನತೆಯು ಸುಬ್ಬಣ್ಣಧ್ವನಿ ಶಕ್ತಿಯು ಅಷ್ಟಕ್ಕೇ ಸೀಮಿತವಾಗಿ ಹೋಗಬಾರದೆಂದು ಬಯಸಿದ್ದರು. ಹಾಗೆ ಬಯಸಿದವರಲ್ಲಿ ಮಿತ್ರ ಲಕ್ಷ್ಮೀನಾರಾಯಣ ಭಟ್ಟರೂ ಇದ್ದರು. ಜನತೆಯ ಬಯಕೆಯಂತೆಯೇ ಆಯಿತು. ಸುಬ್ಬಣ್ಣನವರ ಸಂಗೀತದ ಒರತೆ ಅಷ್ಟಕ್ಕೇ ನಿಲ್ಲದೇ ಬಹುದೊಡ್ಡ ಝರಿಯಾಗಿ, ಹೊಳೆಯಾಗಿ ನಾಡಿನುದ್ದಕ್ಕೂ ಹರಿದು ಜನಮನದಲ್ಲಿ ಧುಮುಕಿತು.

ತಾತನಿಂದ ಸಂಗೀತದ ಅಡಿಪಾಯ ಹಾಕಿಕೊಂಡಿದ್ದ ಜಿ. ಸುಬ್ರಹ್ಮಣ್ಯ ನಂತರ ಪ್ರಭಾಕರನ್ ಅವರ ಬಳಿ ಶಾಸ್ತ್ರೀಯ ಕರ್ನಾಟಕ ಸಂಗೀತ ಅಭ್ಯಾಸ ಮಾಡಿದ್ದರು. ಪ್ರಸಿದ್ಧ ಗಾಯಕಿ ಬಿ.ಕೆ. ಸುಮಿತ್ರಾ ಕೂಡ ಅದೇ ಸಮಯದಲ್ಲಿ ಅಲ್ಲಿ ಸಂಗೀತದ ಅಧ್ಯಯನ ನಡೆಸಿದ್ದರು. ಪದವಿ ಪಡೆದು ಬೆಂಗಳೂರು ಸೇರಿ ವಕೀಲಿ ವೃತ್ತಿ ಆರಂಭಿಸಿದ ಮೇಲೂ ಅವರಲ್ಲಿದ್ದ ಅಪ್ರತಿಮ ಸಂಗೀತ ಶಕ್ತಿಯು ಹಾಡಿನ ಹಾದಿಯಲ್ಲಿ ನಿರಂತರವಾಗಿ ಸಾಗುವಂತೆ ಪ್ರೇರೇಪಣೆ ನೀಡಿತು. ಬಾಲ್ಯದಲ್ಲಿ ಹಾಡಿದ್ದ, ಉನ್ನತ ಕವಿ ಗೋಪಾಲಕೃಷ್ಣ ಅಡಿಗರ 'ಯಾವ ಮೋಹನ ಮುರಳಿ ಕರೆಯಿತೋ' ಹಾಡಿನಿಂದ ಬಹುಮಾನ ಮತ್ತು ಸ್ಫೂರ್ತಿ ಸಿಕ್ಕಿತ್ತು. ಶ್ರೇಷ್ಠ ಬರಹಗಾರರ ಹಾಡುಗಳನ್ನು ಸುಲಲಿತವಾಗಿ, ವೈವಿಧ್ಯಮಯವಾಗಿ ಸುಗಮವಾದ ರೂಪಿನಲ್ಲಿ ಹಾಡಲು ತೊಡಗಿಕೊಂಡಿದ್ದು ಕನ್ನಡ ಸಂಗೀತ ಲೋಕಕ್ಕೆ ವರ ಪ್ರದಾನವಾಯಿತು. ಮಹಾ ಸಿದ್ಧಿಯ ಬರಹಗಾರರಾಗಿದ್ದ ರಾಷ್ಟ್ರಕವಿ ಕುವೆಂಪು, ವರಕವಿ ಬೇಂದ್ರೆ, ಅಡಿಗರಲ್ಲದೆ ಶ್ರೇಷ್ಠ ಕವಿಗಳಾದ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಜಿ.ಎಸ್. ಶಿವರುದ್ರಪ್ಪ, ನಿಸಾರ್ ಅಹ್ಮದ್ ಮುಂತಾದವರ ಎತ್ತರದ ಕವಿತೆಗಳನ್ನು ಅಷ್ಟೇ ತನ್ಮಯತೆಯಿಂದ, ಸಿದ್ಧಿಯಿಂದ ಪ್ರಸ್ತುತ ಪಡಿಸಿದ ಖ್ಯಾತಿಗೊಳಗಾದರು.

ಶಿವಮೊಗ್ಗ ಸುಬ್ಬಣ್ಣನವರ ಧ್ವನಿಯಲ್ಲಿ ಮೂಡಿದ್ದ ಹಾಡುಗಳು ಮನೆಗಳಲ್ಲಿ ಮತ್ತು ಶಾಲೆಗಳಲ್ಲಿ ವಿಶೇಷ ಕಾರ್ಯಕ್ರಮವಿದ್ದಾಗಲೆಲ್ಲ ಜನಜನಿತವಾದವು. ಯಾರು ಬರೆದಿದ್ದು ಅಥವಾ ಹಾಡಿದ್ದು ಅನ್ನುವ ವಿಚಾರ ಅಂದು ಬಹುತೇಕ ಜನರಿಗೆ ತಿಳಿದಿರಲಿಲ್ಲ. ಆದರೆ ಹಾಡಿನ ಒಳಸತ್ವ ಮತ್ತು ಹಾಡಿದ ರೀತಿಯಲ್ಲಿನ ಸೆಳೆತದಿಂದ ಹಾಡುಗಳು ಸಾಮಾನ್ಯ ಜನಜೀವನದ ಭಾಗವಾಗಿ ಹೋಗಿದ್ದವು. ಅದು ಟೆಲಿವಿಷನ್ ಮತ್ತು ಸೆಲ್ ಫೋನ್, ಅಂತರ್ಜಾಲದ ಕಾಲವಾಗಿರಲಿಲ್ಲ. ರೇಡಿಯೋ ಮೂಲಕವೇ ಮಾಹಿತಿ

PAGE DONATED BY : **SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT**

ಸಿಗಬೇಕಿತ್ತು. ಬೆಳಿಗ್ಗೆ ಸಮಯ ಏಳೂ ಹತ್ತರಿಂದ ಏಳು ಇಪ್ಪತ್ತರ ತನಕ ಪ್ರದೇಶ ಸಮಾಚಾರ ಮುಗಿದ ಮೇಲೆ ಏಳು ಮೂವತ್ತೈದಕ್ಕೆ ವಾರ್ತೆ ಬರುವ ನಡುವಿನ ಸಮಯದಲ್ಲಿ ಆಕಾಶವಾಣಿ ಸಂಗೀತ ಕಾರ್ಯಕ್ರಮ ಬಿತ್ತರಿಕೆಯಾಗಿದ್ದ ನೆನಪಿದೆ. ಮೊದಲು ಶಿವಮೊಗ್ಗ ಸುಬ್ಬಣ್ಣ ಹೆಸರು ಕೇಳಿದ್ದು ಅಲ್ಲೇ. ಅವರ ಸುಗಮ ಸಂಗೀತವು ಆಗಾಗ ಪ್ರಸಾರವಾಗಿತ್ತು. ರೇಡಿಯೋ ಕೂಡಾ ಹೆಚ್ಚು ಮನೆಗಳಲ್ಲಿ ಇರಲಿಲ್ಲ. ಆದಾಗ್ಯೂ ಹಾಡಿನ ಸೆಳೆತ ಇಷ್ಟು ಪ್ರಭಾವಿಯಾಗಿತ್ತೆಂದರೆ ಬಾಯಿಂದ ಬಾಯಿಗೆ ಹೋಗಿ ಇಡೀ ಸಮಾಜವನ್ನು ಆವರಿಸಿತ್ತು.

ಸುಬ್ಬಣ್ಣ ಹಾಡುವುದನ್ನು ಎದುರಲ್ಲಿ ಕುಳಿತು ಮೊದಲನೆಯ ಸಾರಿ ನಾನು ಕೇಳಿದ್ದು ಸ್ನಾತಕೋತ್ತರ ಪದವಿ ಓದಲು ಧಾರವಾಡದಲ್ಲಿದ್ದಾಗ ವಿದ್ಯಾವರ್ಧಕ ಸಂಘದ ಕಾರ್ಯಕ್ರಮದಲ್ಲಿ ಎಂದು ನೆನಪು. ಅಲ್ಲಿ ಕೇಳಿದ ನಂತರ ಅವರ ಹಾಡು ಸದಾ ಜೊತೆಯಲ್ಲಿವೆ. ಅಂದಿನ ಶ್ರೇಷ್ಠ ಕವಿಗಳಾದ ಕುವೆಂಪು, ಬೇಂದ್ರೆ, ಅಡಿಗ ಮುಂತಾದವರ ಹಾಡುಗಳನ್ನು ಆಯ್ದುಕೊಂಡು ಅವುಗಳ ಸಾರವನ್ನು ಅದೇ ನವಿರಿಂದ, ಅದೇ ಭಾವದಿಂದ, ಅರ್ಥ ಹಿಡಿದು ಸತ್ವಪೂರ್ವಕವಾಗಿ ಹಾಡಿನ ಮೂಲಕ ಪ್ರಸ್ತುತಪಡಿಸುವುದು ಸಾಮಾನ್ಯದ ಸಂಗತಿಯಾಗಿರಲಿಲ್ಲ. ಅಂತಹ ಕ್ಲಿಷ್ಟ ಸವಾಲುಗಳನ್ನು ಸರಳವಾಗಿ ಸುಗಮವಾಗಿ, ಸಮರ್ಪಕವಾಗಿ ನಿರೂಪಿಸಿ ಹಾಡಿನ ಮೂಲಕ ಜನತೆಯನ್ನು ತಲುಪಿದ ಖ್ಯಾತಿ ಸುಬ್ಬಣ್ಣರ ಪಾಲಿಗೆ ಸಿಗುತ್ತದೆ.

ಶಿವಮೊಗ್ಗ ಸುಬ್ಬಣ್ಣ ಅವರ ಸಾಧನೆ ಮತ್ತು ಪುರಸ್ಕಾರಗಳ ಕುರಿತು ವಿಸ್ತರಿಸುವ ಅವಶ್ಯಕತೆಯಿಲ್ಲ. ಅದು ಎಲ್ಲರಿಗೆ ತಿಳಿದ ವಿಷಯ. ಆದರೆ ಅವುಗಳ ಕುರಿತು ಆದಷ್ಟು ಸಂಕ್ಷಿಪ್ತವಾಗಿ ಇಲ್ಲಿ ಹೇಳದಿದ್ದರೆ ಸರಿಯಲ್ಲ. ಸುಬ್ಬಣ್ಣ ಹಾಡಿದ್ದ ಎಲ್ಲ ಹಾಡುಗಳೂ ತನ್ನದೇ ರೀತಿಯಲ್ಲಿ ವಿಶೇಷವಾಗಿವೆ. ಅವುಗಳಲ್ಲಿ ಯಾವ ಹಾಡುಗಳು ಉತ್ತಮವಾದುವೆಂದು ಹೆಸರಿಸುವುದು ಸಾಧ್ಯವಿಲ್ಲ. ಜ್ಞಾನಪೀಠ ಪ್ರಶಸ್ತಿ ವಿಜೇತ ಕಂಬಾರ ರಚಿತ 'ಕಾಡು ಕುದುರೆ ಓಡಿ ಬಂದಿತ್ತಾ...' ಎಂಬ ಸುಬ್ಬಣ್ಣರ ಹಾಡು ಕನ್ನಡದ ಹಿನ್ನೆಲೆ ಗಾಯನಕ್ಕೆ ತಂದುಕೊಟ್ಟ ಪ್ರಥಮ ರಾಷ್ಟ್ರ ಪ್ರಶಸ್ತಿ. ಪ್ರಶಸ್ತಿ ಪ್ರದಾನ ಮಾಡಿದ ಅಂದಿನ ರಾಷ್ಟ್ರಪತಿ ನೀಲಮ್ ಸಂಜೀವ ರೆಡ್ಡಿ ಕೂಡ ಹಾಡನ್ನು ತುಂಬಾ ಮೆಚ್ಚಿದ್ದರಂತೆ. ಕುದುರೆಯ ಲಯವನ್ನು ಹಾಡಿನಲ್ಲಿ ಹಿಡಿದಿದ್ದ ರೀತಿ ಅನುಪಮ. ಅಂದಿನ ಸಮಾರಂಭಕ್ಕೆ ಬಂದಿದ್ದ ಖ್ಯಾತ ಪತ್ರಕರ್ತ, ಚಿತ್ರ ಕಥೆಗಾರ, ಅಬ್ಬಾಸ್ ಹಾಡನ್ನು ಕೇಳಿಯೇ ಅದು ಕುದುರೆಯ ಓಟದ ಕುರಿತಾಗಿಯೇ ಎಂದು ಕೇಳಿದ್ದರಂತೆ!

'ಆನಂದಮಯ...', 'ಕೋಡಗನ ಕೋಳಿ ನುಂಗಿತ್ತಾ', 'ಬಿದ್ದೀಯಬ್ಬೇ', 'ನಿನ್ನೆಡೆಗೆ ಬರುವಾಗ', 'ಚಿಂತೆ ಯಾತಕೆ ಗೆಳತಿ', 'ದೂರಕೆ ದೂರಕೆ', 'ಬಾರಿಸು ಕನ್ನಡ ಡಿಂಡಿಮವ', 'ತೇ ನವಿನಾ', 'ಯಾರಿಗೂ ಹೇಳೋಣ ಬ್ಯಾಡ', 'ಏನಾದರೂ ಆಗು...' ಹೀಗೆ ಅವರು ಹಾಡಿರುವ, ನಮ್ಮನ್ನು ತಟ್ಟಿರುವ ಹಾಡುಗಳನ್ನು ಹೆಸರಿಸುತ್ತಲೇ ಹೋಗಬಹುದು. ಶಿಶುನಾಳ ಷರೀಫರ ರಚನೆಗಳನ್ನು ಹಾಡಿನ ಮೂಲಕ ಜನರ ಹತ್ತಿರ ತಂದವರು ಸುಬ್ಬಣ್ಣ.

ಅಷ್ಟೆಲ್ಲ ಪ್ರಶಸ್ತಿ, ಪುರಸ್ಕಾರಗಳು, ಸ್ಥಾನಮಾನಗಳಿಗೆ ಭಾದ್ಯರಾದ ಸುಬ್ಬಣ್ಣ ಸರಳ ಬದುಕು, ನೇರ ನಡೆ ನುಡಿಗಳಿಗೆ ಹೆಸರಾದವರು. ಎಳ್ಳಷ್ಟೂ ಹಮ್ಮು ಬಿಮ್ಮುಗಳನ್ನು ತೋರಿಸುತ್ತಿರಲಿಲ್ಲ ಎಂದು ಅವರನ್ನು ಹತ್ತಿರದಿಂದ ತಿಳಿದವರು ಹೇಳುವ ಮಾತು. ದೊಡ್ಡವರು, ಸಣ್ಣವರು ಎಂದು ನೋಡದೆ ಎಲ್ಲರಲ್ಲಿಯೂ ಆತ್ಮೀಯತೆಯಿಂದ ನಡೆದುಕೊಳ್ಳುತ್ತಿದ್ದರು. ಯಾರೇ ಕೇಳಿದರೂ, ಯಾವುದೇ ಸಂದರ್ಭದಲ್ಲಿಯೂ ಬಿಗುಮಾನ ತೋರದೆ ಹೃದಯ ತುಂಬಿ ಹಾಡಿದ್ದರು. ಏನಾದರೂ ಸರಿಯೇ ಮೊದಲು ಮಾನವನಾಗು.. ಎನ್ನುವ ನುಡಿಯನ್ನು ರಾಗದ ಮೂಲಕವೂ ತಿಳಿಸಿದರು ಸುಬ್ಬಣ್ಣ.

ಸುಬ್ಬಣ್ಣರ ಸಂಗೀತವು ಕರ್ನಾಟಕದ ಎಲ್ಲ ಪ್ರದೇಶದ ವಿವಿಧ ರೀತಿಯ ಭಾವನೆಗಳಿಗೆ ಹದವಾಗಿ ಸ್ಪಂದಿಸಿದೆ ಎಂಬುದು ಮಹತ್ವದ ಅಂಶ. ಮಲೆನಾಡು, ಕರಾವಳಿ, ಮೈಸೂರು ಮತ್ತು ಉತ್ತರ ಕರ್ನಾಟಕದ ಭಾಗಗಳ ಪ್ರಸಿದ್ಧ ಕವಿಗಳ ಹಾಡುಗಳನ್ನು ಆಯಾ ಪ್ರದೇಶದ ಭಾವಕ್ಕೆ ಮತ್ತು ಎಲ್ಲ ಕನ್ನಡಿಗರಿಗೆ ಬೆಸೆದು ಬೆರಗಾಗುವ ರೀತಿಯಲ್ಲಿ ರಾಗ ಮತ್ತು ಭಾವ ನಿರೂಪಣೆ ಮಾಡಿದ್ದಾರೆ. ಸುಬ್ಬಣ್ಣರ ಬದುಕು ಸಂಗೀತಕ್ಕೆ ಮುಡುಪಾಗಿತ್ತು. ಸುಗಮ ಸಂಗೀತವೇ ಆರಾಧನೆಯಾಗಿತ್ತು. ಸುಬ್ಬಣ್ಣ ನೀಡಿರುವ ಸುಗಮ ಸಂಗೀತವು ಅಮರಗೀತೆಗಳ ಸಾಲಿನಲ್ಲಿ ನಿಂತಿವೆ.

*(ಕೃಪೆ : ವಿಶ್ವವಾಣಿ)*

## Donation to Education Fund

1. T. L. Hegde Andheri .......................... 10000/-
2. Mrs. Savitri S. Shastri .......................... 5000/-
3. Ramesh Hosmane Pune ..................... 5000/-
4. Kishore Hegde .................................... 1000/-

## Donation to Medical Fund

1. Mrs. Savita Rao ................................ 50000/-

## HAVYAKA WELFARE TRUST BANK A/C DETAILS

Due to the merger of Corporation Bank with the Union Bank of India we request the members to note the change in the bank details

**Union Bank of India, Santacruz (E), Mumbai Branch, Mumbai 400 029**

1) **Havyaka Welfare Trust**
   **S.B. A/c No. 520101249405926**
   **IFS Code : UBINO904996**

2) **Havyaka Welfare Trust Women Welfare Cell**
   **S.B. A/c No. 520101249405962**
   **IFS CODE : UBINO904996**


**Donations to Havyaka welfare Trust' qualify for tax deduction under section 80 (G).**

# The Breathtaking Chardham!

✍ **Yashashree Akadas**



Uttarakhand's Chardham yatra, also called Chota Char Dham, is a pilgrimage circuit in the Garhwal region of Uttarakhand that covers Yamunotri, Gangotri, Kedarnath and Badrinath temples (not to be confused with the main Chardham Yatra covering Puri, Rameswaram, Dwarka and Badrinath).




If you are curious about this yatra or planning on going there anytime soon, I will be sharing some details and the story behind our yatra in this article.

Whoever has researched about Chardham Yatra, can relate to the fact that there's an overload of information to both convince and confuse people on how they should plan their yatra. Ours was a last-minute trip (like always :P), so we had to make quick decisions with fewer options in hand.

Soon as we decided on the dates, June 24th - July 4th, we started receiving a flood of notifications on over-crowding, strict measures, mandatory registrations, and paperwork to even enter the region. So the easiest way was to book a tour package and let them manage everything. But that's too easy, isn't it? So after some research, we realised that managing the tour on our own could be risky, but much better cost-wise and most importantly, more fun :)

We booked a taxi operator through a contact. Innova Crysta was going to be our chariot for the 10 days of our yatra. We managed to do the government registration online, between slots running out and our adamancy to go for the yatra. We also managed helicopter booking for Kedarnath online! So 20 days to go and we thought we were through the most difficult part of getting registrations. Our taxi operator suggested us to NOT book hotels online and after checking with a few other people, decided to do the same.

24th June was D-day. We started from Mumbai to reach Haridwar; excited to reach our hotel Kush Ganga which was at a walkable distance from the 'Ganga Aarti Sthal'. But when we took a taxi, we were taken by surprise because apparently, the entire 'Har ki Pauri' lane is a no-vehicle zone with only cycle rickshaws to your rescue. We walked for 1.5 km with heavy luggage across narrow lanes swamped with flies to reach our hotel; decent enough for its location. So in case, you plan on visiting Haridwar for Ganga Aarti, ensure your hotel is away from Har ki Pauri and do call them to inquire and confirm the location. We attended the beautiful Ganga Aati there, had some hot Puri-bhaji at the famous 'Panditji Pooriwale' and rested well before starting from the hotel early at 6:00 am the next morning to reach Barkot.

Though we planned to go to Barkot, our driver suggested travelling further to Syanachatti, closer to Yamunotri (First Dham), so that we could start our trek earlier the next morning. We drove through fallen boulders and broken roads, to stay at the lovely Durga Resort with beautiful views of the Yamuna River. We left early at 5:30 am the next morning and reached the starting point of the trek. Horse and doli rates depend a lot on the season. It was 1.5k when we were there since it was offseason (with monsoon commencing). Three of us, amma, appa and I decided to walk all the way and it took us 3 hours one way upwards for 7 km. With plenty of shops, seating, food and beverages available on the way, it is a steep climb (khadi chadhaai, as the locals say) and can get quite difficult for people who are not very physically active. However, it is definitely rewarding when you reach there and get to see the hot spring and the beautiful temple.

We could hardly feel our legs after returning to the car and decided to halt for the night at the cosy Divine hotel in Barkot, surrounded by scenic views. The next day we decided to stretch our travel time a little and reached the loveliest small town of Harsil. In the common itineraries, people generally halt at Uttarkashi, but we wanted to stay closer to the temple so that we could visit as early as possible and avoid crowds. The route from Uttarkashi to Harsil is breathtakingly beautiful. With cloudy weather, huge steep mountains and rivers flowing in full force, we just couldn't get enough of the spectacular views. We stayed at a surprisingly luxurious hotel in the middle of nowhere, called Prakriti - The Retreat (a little heavy on the pocket, but after the long trek and tiring journey, seemed worth every penny!). We were the only ones in the resort and just 45 mins away from Gangotri Dham. The next morning, we were out by 5:30 am and reached Gangotri at 6:30 am. With very few people, the temple looked so simple yet overwhelmingly beautiful and Ganga, like always, flowing fiercely next to the temple.

*(To be contd...)*

*PAGE DONATED BY : **SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

# ಸಂಕ್ಷಿಪ್ತ ಸುದ್ದಿಗಳು

## ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ : ಡಾ. ದಿನೇಶ್ ಶೆಟ್ಟಿ ರೆಂಜಾಳ ಅವರ 'ಮುಂಬಯಿ ಕನ್ನಡ ಪತ್ರಿಕೋದ್ಯಮ' ಕೃತಿ ಬಿಡುಗಡೆ



ಕುರ್ಲಾ ಪೂರ್ವದ ಬಂಟರ ಭವನದ ಅನೆಕ್ಸ್ ಸಭಾಭವನದಲ್ಲಿ ಅ. 9 ರಂದು ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ ಮತ್ತು ನಗರದ ವಿವಿಧ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಪತ್ರಕರ್ತ ಡಾ. ದಿನೇಶ್ ಶೆಟ್ಟಿ ರೆಂಜಾಳ ಅವರ 'ಮುಂಬಯಿ ಕನ್ನಡ ಪತ್ರಿಕೋದ್ಯಮ' ಸಂಶೋಧನಾ ಕೃತಿ ಬಿಡುಗಡೆಯಾಯಿತು. ದೀಪವನ್ನು ಪ್ರಜ್ವಲಿಸಿ ಉದ್ಘಾಟಿಸಿದ ಜ್ಯೋತಿ ಪ್ರಕಾಶ್ ಕುಂಠಿನಿ, ಕುಸುಮಾ ಚಂದ್ರಶೇಖರ ಪಾಲೆತ್ತಾಡಿ, ಶಿಕ್ಷಕಿ ಜಯಲಕ್ಷ್ಮೀ ಸುಭಾಶ್ ಶಿರಿಯಾ, ಸುರೇಖಾ ದಯಾಸಾಗರ ಚೌಟ, ಮಲ್ಲಿಕಾ ನವೀನ್ ಇನ್ನ, ಪ್ರೀತಿ ರವೀಂದ್ರ ಶೆಟ್ಟಿ ಇವರೆಲ್ಲರೂ ಡಾ. ದಿನೇಶ್ ಶೆಟ್ಟಿ ರೆಂಜಾಳ ಅವರಿಗೆ ಶುಭಕೋರಿ ಅವರ ಬದುಕು ಉಜ್ವಲವಾಗಲಿ ಎಂದು ಹಾರೈಸಿದರು. ವೇದಿಕೆಯಲ್ಲಿ ಕರ್ನಾಟಕ ಮಲ್ಲದ ಸಂಪಾದಕ ಚಂದ್ರಶೇಖರ ಪಾಲೆತ್ತಾಡಿ, ಹಿರಿಯ ಪತ್ರಕರ್ತ ದಯಾಸಾಗರ್ ಚೌಟ, ಛಾಯಾಕಿರಣದ ಸಂಪಾದಕ ಪ್ರಕಾಶ್ ಕುಂಠಿನಿ, ಉದಯವಾಣಿ ಪತ್ರಿಕೆಯ ವರದಿಗಾರ ಸುಭಾಶ್ ಶಿರಿಯಾ ಹಾಗೂ ರವೀಂದ್ರ ಶೆಟ್ಟಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕಿ ಡಾ. ಪೂರ್ಣಿಮಾ ಎಸ್. ಶೆಟ್ಟಿ ನಿರೂಪಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಮಲ್ಲದ ಸಂಪಾದಕ ಚಂದ್ರಶೇಖರ ಪಾಲೆತ್ತಾಡಿ ಇವರ ಗೌರವ ಉಪಸ್ಥಿತಿಯಲ್ಲಿ, 'ಮುಂಬಯಿ ಕನ್ನಡ ಪತ್ರಿಕೋದ್ಯಮ ಅಂದು-ಇಂದು-ಮುಂದು' ಎಂಬ ವಿಚಾರ ಸಂಕಿರಣ ಜರಗಿತು. ಈ ವಿಚಾರ ಸಂಕಿರಣವು ಕರ್ನಾಟಕ ಮಲ್ಲದ ಹಿರಿಯ ಉಪ ಸಂಪಾದಕ, ಸಾಹಿತಿ ಶ್ರೀನಿವಾಸ ಜೋಕಟ್ಟೆ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪತ್ರಕರ್ತರುಗಳಾದ ಪ್ರಕಾಶ್ ಕುಂಠಿನಿ (ಸಂಪಾದಕ : ಛಾಯಾಕಿರಣ), ಅಶೋಕ್ ಪಕ್ಕಳ (ಗೌ. ಸಂಪಾದಕ : ಬಂಟರವಾಣಿ), ಅಶೋಕ್ ಸುವರ್ಣ (ಸಂಪಾದಕ : ಮೊಗವೀರ), ಡಾ. ಈಶ್ವರ ಅಲೆವೂರು (ಸಂಪಾದಕ : ಅಕ್ಷಯ), ವಿಶ್ವನಾಥ ಅಮೀನ್ ನಿಡ್ಡೋಡಿ (ಹಿರಿಯ ಉಪ ಸಂಪಾದಕ : ಕರ್ನಾಟಕ ಮಲ್ಲ), ಡಾ. ಜ್ಯೋತಿ ಸತೀಶ್ (ಸಂಪಾದಕಿ : ನೇಸರು), ನ್ಯಾಯವಾದಿ ಅಮಿತಾ ಭಾಗವತ್ (ಸಂಪಾದಕಿ : ಹವ್ಯಕ ಸಂದೇಶ), ಹರೀಶ್ ಮೂಡಬಿದ್ರಿ, ಪುಣೆ (ಪತ್ರಕರ್ತ) ಇವರೆಲ್ಲರೂ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಈ ಕಾರ್ಯಕ್ರಮವನ್ನು ಪತ್ರಕರ್ತ ದಯಾಸಾಗರ್ ಚೌಟ ನಿರೂಪಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಐಲೇಸಾ ತಂಡದ ಸುರೇಂದ್ರ ಕುಮಾರ್ ಮಾರ್ನಾಡ್ ನಿರೂಪಣೆಯಲ್ಲಿ ವಿಜಯ್ ಶೆಟ್ಟಿ ಮೂಡುಬೆಳ್ಳೆ, ಕಾವ್ಯಾ ಎನ್. ಶೆಟ್ಟಿ, ಕಾವ್ಯ ಭಾಗ್ವತ್ ಅವರಿಂದ 'ಸರಿಗಮ-ಸಮಾಗಮ' ನಡೆಯಿತು. ತೃಷಾ ಶೆಟ್ಟಿ ಹಾಗೂ ರಕ್ಷಿತಾ ಶೆಟ್ಟಿ ಇವರಿಂದ ಯಕ್ಷಗಾನ ನೃತ್ಯ ನಡೆಯಿತು.

## ಜ್ಯೋತಿ ಅನಂತ ಭಟ್ ಅವರಿಗೆ ಲಲಿತಾ ಕಲಾಶ್ರೀ ಪ್ರಶಸ್ತಿ

ಶ್ರೀಮತಿ ಜ್ಯೋತಿ ಅನಂತ ಭಟ್ ಯಾಜಿಯವರಿಗೆ ಕನ್ನಡ ಕಲಾಕೇಂದ್ರದ ವತಿಯಿಂದ, 63ನೇ ವಾರ್ಷಿಕ ನಾಟಕೋತ್ಸವದಲ್ಲಿ ಸಂಗೀತ ಜಗತ್ತಿನಲ್ಲಿ ಅವರು ಮಾಡಿದ ಸಾಧನೆಗಾಗಿ ಲಲಿತಾ ಕಲಾಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಸಂಗೀತಗಾರ, ನಾಟಕಕಾರ, ಗಾಯಕ ಶ್ರೀ ಗಜಾನನ ಯಾಜಿ ಹಾಗೂ ಶ್ರೀಮತಿ ಕಮಲಾ ಯಾಜಿ ಇವರ ಮಗಳಾದ ಜ್ಯೋತಿ ಅನಂತ ಭಟ್ ಅವರು ಎಳೆ ವಯಸ್ಸಿನಲ್ಲೇ ಪ್ರಾಥಮಿಕ ಸಂಗೀತ ಶಿಕ್ಷಣ ತಂದೆಯವರಿಂದ ಆರಂಭಿಸಿ, ಶ್ರೀಮತಿ ಮೇಧಾ ಕುಲಕರ್ಣಿ ಇವರಿಂದ ಸುಗಮ ಸಂಗೀತ ಮಾರ್ಗದರ್ಶನ, ಪ್ರಸಿದ್ಧ ಗಾಯಕಿ ಶ್ರೀಮತಿ ಪದ್ಮಾವತಿ ಶಾಲಿಗ್ರಾಂ ಗೋಖಲೆ ಇವರಿಂದ ಹಿಂದುಸ್ತಾನಿ ಶಾಸ್ತ್ರೀಯ ಸಂಗೀತ ಮಾರ್ಗದರ್ಶನ ಪಡೆದಿದ್ದಾರೆ. ಮುಂದೆ ಮುಂಬೈ ವಿಶ್ವವಿದ್ಯಾನಿಲಯದಿಂದ ಸಂಗೀತದಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ಶ್ರೀಮತಿ ವಸುಧಾ ಲಿಮಯೇ ಇವರಿಂದಲೂ ಮಾರ್ಗದರ್ಶನ ಪಡೆದಿದ್ದಾರೆ. ಕನ್ನಡದಲ್ಲಿಯೇ ತಮ್ಮ ಪ್ರಾಥಮಿಕ ಹಾಗೂ ಎಸ್.ಎಸ್.ಸಿ. ಬೋರ್ಡ್ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ ಹೆಚ್ಚಿನ ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದು ವಿಶೇಷ ಬಹುಮಾನಗಳಿಸಿದ್ದಾರೆ. ಕಾಮರ್ಸ್ ಪದವಿಯನ್ನು ಮುಗಿಸಿ ಮುಂಬೈ ವಿಶ್ವವಿದ್ಯಾನಿಲಯದ ಸಂಗೀತ ವಿಭಾಗದಿಂದ BFA (vocal) ದಲ್ಲಿ ಪ್ರಥಮ ಸ್ಥಾನ ಹಾಗೂ ಅಗ್ನಿ ಬುವಾ ಸ್ಕಾಲರ್‌ಶಿಪ್ ಹಾಗೂ MFA (vocal) ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಅದರ ಜೊತೆಗೆ ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯದಿಂದ ಅತಿ ಹೆಚ್ಚು ಅಂಕ ಗಳಿಸಿದ ಕೀರ್ತಿಯೊಂದಿಗೆ ಸಂಗೀತ ವಿಶಾರದ ಪದವಿ ಪಡೆದಿದ್ದಾರೆ.

ಶಾಲೆಯ ದಿನಗಳಿಂದಲೇ ಅಂತರ್ ಶಾಲೆ ಸಂಗೀತ ಸ್ಪರ್ಧೆ, ಅಂತರ್ ವಿಶ್ವವಿದ್ಯಾಲಯಗಳ ಸಂಗೀತ ಸ್ಪರ್ಧೆಯಲ್ಲಿ ಬಹುಮಾನಗಳನ್ನು ಗಳಿಸಿದ್ದಾರೆ. ಹಾಗೇ 1992-93ರಲ್ಲಿ ಭಾವನಗರದಲ್ಲಿ ನಡೆದ West Zone ಸ್ಪರ್ಧೆಯಲ್ಲಿ ಭಾಗವಹಿಸಿ ಮುಂಬೈ ವತಿಯಿಂದ ಪ್ರಥಮ ಬಹುಮಾನ ಪಡೆದಿದ್ದಾರೆ. ನಾಗಪುರದಲ್ಲಿ ನಡೆದ ಅಂತಿಮ ನೇಷನಲ್ ವೆಸ್ಟರ್ನ್music ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿದ್ದಾರೆ. 1992-93 ಸಾಲಿನ 'Best student in

*PAGE DONATED BY : **SHRI A. K. BHAT, CHITRIGI & FAMILY***



cultural activities award' ಚೆನ್ನೈ ಕಾಲೇಜ್ ವತಿಯಿಂದ ಪಡೆದಿದ್ದಾರೆ. 1993 ರಲ್ಲಿ ಮುಂಬೈ ವಿಶ್ವವಿದ್ಯಾನಿಲಯದಿಂದ ಕೊಡಮಾಡುವ ಪ್ರಥಮ "ಪಂಡಿತ್ ಭೀಮಸೇನ್ ಜೋಶಿ ಸ್ಕಾಲರ್ಶಿಪ್" ಖುದ್ದು ಪಂಡಿತ್ ಭೀಮಸೇನ್ ಜೋಶಿಯವರಿಂದಲೇ ಸಿಕ್ಕಿದೆ. 2000 ಸಾಲಿನ "ಕಲಾ ಜಗತ್ತು " ಕೊಡಮಾಡುವ 'ಯುವ ಗಾಯಕಿ ಪುರಸ್ಕಾರ' 2016 ರಲ್ಲಿ ಎಂ/ ಪಶ್ಚಿಮ ವಿಭಾಗದ 'ಆದರ್ಶ ಶಿಕ್ಷಕಿ' ಪುರಸ್ಕಾರ ಹೀಗೆ ಹಲವಾರು ಪುರಸ್ಕಾರ ಪಡೆದಿದ್ದಾರೆ.

ಶಾಸ್ತ್ರೀಯ ಸಂಗೀತದ ಹಾಗೂ ಸುಗಮ ಸಂಗೀತದ ಹಲವಾರು ಕಾರ್ಯಕ್ರಮ ಭಾರತದ ಹಲವೆಡೆಗಳಲ್ಲಿ ಆಗಿವೆ. ಅನೇಕ ಸಂಘ ಸಂಸ್ಥೆಗಳಿಂದ ನಡೆಯುವ ಸಂಗೀತ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಸಹಕರಿಸಿದ್ದಾರೆ. ಅನೇಕ ನೃತ್ಯ ರೂಪಕಗಳಿಗೆ ಸಂಗೀತ ನೀಡಿದ್ದಾರೆ. 1993 ರಿಂದ 2003 ರವರೆಗೆ ಮುಂಬೈ ಆಕಾಶವಾಣಿಯಲ್ಲಿ ಗುಜರಾತಿ ಹಾಗೂ ಕನ್ನಡ ಭಾಷೆಯ ಅನೌನ್ಸರ್ ಕಮ್ ಪ್ರೊಡಕ್ಷನ್ ಅಸಿಸ್ಟಂಟ್ ಎಂದು ಕೂಡ ಕಾರ್ಯ ನಿರ್ವಹಿಸಿದ್ದಾರೆ. 1994 ಜುಲೈ ಯಿಂದ ಬೃಹನ್ ಮುಂಬೈ ಮಹಾನಗರ ಪಾಲಿಕೆ ಸಂಗೀತ ಅಕಾಡೆಮಿಯಲ್ಲಿ ಸಂಗೀತ ಶಿಕ್ಷಕಿಯಾಗಿ ಕೆಲಸ, ಈಗ ಸಂಗೀತ ನೀರೀಕ್ಷಕಿಯಾಗಿ ತೇರ್ಗಡೆ, ಶಿಕ್ಷಕಿಯಾಗಿ ಕನ್ನಡ, ಹಿಂದಿ, ಮರಾಠಿ, ಇಂಗ್ಲೀಷ್ ಭಾಷೆಗಳಲ್ಲಿ ನಾಟಕಗಳನ್ನು ಬರೆದು ನಿರ್ದೇಶನ, ಹಾಗೆಯೇ ಶಾಸ್ತ್ರೀಯ ಸಂಗೀತ ಪರೀಕ್ಷೆಗಾಗಿ ಮಹಾನಗರ ಪಾಲಿಕೆಯ ಮಕ್ಕಳಿಗೆ ತರಬೇತಿ - ಹೀಗೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅವರಿಗೆ ನಮ್ಮ ಅಭಿನಂದನೆಗಳು.




## ಉದಯೋನ್ಮುಖ ಕೊಳಲುವಾದಕ 'ಕಿಶೋರ್ ಹೆಗಡೆ'

ಕಿಶೋರ್ ಹೆಗಡೆ (BSc.) ಇವರು ಗೌರೀಶ ಯಾಜಿಯವರ ಹತ್ತಿರ 7 ವರ್ಷ ಸಂಗೀತ ಅಭ್ಯಾಸ ಮಾಡಿ, ಮುಂಬೈಯಲ್ಲಿ ಪಂಡಿತ್ ಮಿಲಿಂದ ರಾಯ್ಕರ ಹಾಗೂ ಪಂಡಿತ್ ಕೃಷ್ಣ ಭಟ್ ಇವರ ಹತ್ತಿರ ಕೊಳಲು ಅಭ್ಯಾಸ ಮಾಡುತ್ತಿದ್ದು ಹಲವು ಕಚೇರಿ ಕೊಟ್ಟಿದ್ದಾರೆ. ಮುಖ್ಯವಾಗಿ ಮುಧೋಳ ಉತ್ಸವ ಪುಣ್ಯಸ್ಮರಣೆ ಪಂಡಿತ ಷಡಕ್ಷರಿ ಗವಾಯಿ ಅಕಾಡೆಮಿಯಲ್ಲಿ ಕಿಶೋರಿ ಲಿಮೊನ್ಕರ್ ನೆನಪಿನ ಗುರುವಂದನಾ ಕಾರ್ಯಕ್ರಮ, ನವರಂಗ ಕಾರ್ಯಕ್ರಮ ರಿವಾಜ್ ಫೌಂಡೇಶನ್ ಥಾಣೆ. ದಿನಾಂಕ 10-07-22 ರಂದು ಮುಂಬೈ ಮರಾಠಿ ಸಾಹಿತ್ಯ ಸಂಘ ಗಿರ್‌ಗಾಂವ್‌ನಲ್ಲಿ ಸಂತ ಬಹೆಣಾಬಾಯಿ ಶಿವೂರ್ಕರ್ - ಭಾಗ 1 ಅಭಂಗವಾಣಿ ಕಾರ್ಯಕ್ರಮ.

ಕರ್ನಾಟಕ ವಿದ್ಯಾಲಯದ ಹಿಂದುಸ್ತಾನಿ ವಾದ್ಯ-ಸಂಗೀತ ಸ್ಫರ್ಧೆಯಲ್ಲಿ ಎರಡು ಬಾರಿ ಪ್ರಥಮ ಸ್ಥಾನ ಪಡೆದಿದ್ದಾರೆ. ಹಲವಾರು ಧ್ವನಿ ಮುದ್ರಿಕೆಗಳಲ್ಲಿ (Documentary) ಸಂಗೀತ ನುಡಿಸಿದ್ದಾರೆ. ಇವರು ನಮ್ಮ ಹವ್ಯಕಾ ಕಲೀನಾದಲ್ಲಿ ಅಭ್ಯಾಸ ಮುಂದುವರಿಸುತ್ತಿದ್ದಾರೆ. ಅವರಿಗೆ ನಮ್ಮ ಶುಭ ಹಾರೈಕೆಗಳು.



## Thread Changing Function at Dombivli

The Upakarma (Thread Changing Function) was arranged at Havyaka Medical Centre on 22/08/2022 between 7:00 AM to 8:30 AM led by Shri Vedamurthi Chandrashekhar Bhat. About 17 members participated in the ceremony.

## Felicitation of Smt. Roopa Bhat



Abhinaya Mantapa, a reputed cultural association in Mumbai for the last 4 decades, felicitated Smt. Roopa Bhat for her contribution as an artist and dramatist. Roopa Bhat was honoured with an appreciation award. She has also contributed as a child artist in several dramas of Abhinaya Mantapa 30 years ago, in super hit tuludramas like Basanti, Suligaali, Ee Nalkedaaye, Good bye Kudla, etc., She has been with them from 1987-till now. Acting has always been Roopa's passion since childhood. She says with pride that today she is a successful dubbing artist due to the everlasting encouragement and support that she received from her parents from the beginning for participating in dramas.

***We congratulate her.***

*PAGE DONATED BY :* ***SMT. SHANTA V. HEGDE, CARMICHAEL ROAD***

'Havyaka Sandesha' September 2022

*RNI NO. MAHBIL / 2000 / 746,*
*Postal R.NO. MCN/161/2021-2023*
*WPP License No. MR / Tech / WPP-130 / North / 2021-2023*
*'Licence to post without prepayment'*

*Posted at Mumbai Patrika Channel Stg. Office Mumbai - 400 001*
Date of Publication : 1st of every month
REGISTERED NEWSPAPER
Date of Posting :
2nd, 3rd of every month

*If undelivered, please return to :*
**HAVYAKA WELFARE TRUST**
B-207, Valmiki Apts., Near Pharmacy College,
Sundar Nagar, Kalina, Vidyanagari P. O.,
Mumbai - 400 098. ✆ 2665 2591
**E-mail : havyakamumbai@hotmail.com**
**Visit : www.havyakamumbai.com**

To,

Published by Narayan Akadas R.
for Havyaka Welfare Trust, Mumbai - 400 098.
being printed at M/s. Navin Printers, Mumbai - 400 016.
Hon. Editor : **Smt. Amita S. Bhagwat**

## Achievements



**Kumar Aarya Hebbar,** S/o. Vrinda & Gururaj Hebbar, scored in Grade 10th 98.8% and also topped in English in ICSE Board. He always has been a gold medalist and has won the highest maths scorer trophy in Asset and part of Manipal Asset program. He participated in various competitive exams and has bagged awards and scholarships, first rank internationally in logiqids.



**Kumari Navya,** D/o. Mrs. Prajna & Mr. Ganapati Joshi, Bhandup scored 95.66% in ICSE Exam held in May 2022. She says it was due to her determination, hard work and proper guidance from teachers & parents.

***We congratulate them and wish them a bright future.***

